ಚರಿತ್ರೆ ಮಾಲೆ - ೬

# ಕರ್ನಾಟಕ ಚರಿತ್ರೆ

( ಕ್ರಿ.ಶ. ೧೮೦೦-೧೯೦೦ )

ಸಂಪುಟ ೬


ಪ್ರಧಾನ ಸಂಪಾದಕರು

**ಪ್ರೊ. ಬಿ. ಷೇಕ್ ಅಲಿ**

ಸಂಪುಟ ಸಂಪಾದಕರು

**ಡಾ. ಸೆಬಾಸ್ಟಿಯನ್ ಜೋಸೆಫ್**



ಪ್ರಸಾರಾಂಗ

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

ವಿದ್ಯಾರಣ್ಯ, ಕಮಲಾಪುರ ೫೮೩ ೨೨೧

# KARNATAKA CHARITRE

(A.D. 1800-1900)
Volume Six in the Series of Comprehensive History of Karnataka

General Editor
**Prof. B. Sheik Ali**
Volume Editor
**Dr. Sebastian Joseph**
Translator
**Prof. R.L. Anantha Ramaiah**

Co-ordinator
**Prof. Laxman Telagavi**
Asst. Co-ordinator
**Dr. C.R. Govindaraju**
Project Assistant
**K.L. Rajashekar**

Published by :
**Prof. A.V. Navada**
Director, Prasaranga
Kannada University, Hampi
Vidyaranya, Kamalapura 583 221

Pages: XXXVI + 340 First Edition 1997

Rs. 200/-

© Kannada University, Hampi, 1997

ಪ್ರಕಾಶಕರು:
**ಪ್ರೊ.ಎ.ವಿ. ನಾವಡ**
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ ೫೮೩ ೨೨೧

ರೂ. ೨೦೦/-

ಮುಖಪುಟ : ಕೆ.ಕೆ. ಮಕಾಳಿ

ಮುದ್ರಕರು:
**ಲಕ್ಷ್ಮಿ ಮುದ್ರಣಾಲಯ**
೧೧೭, ೫ನೇ ಮುಖ್ಯರಸ್ತೆ
ಚಾಮರಾಜಪೇಟೆ, ಬೆಂಗಳೂರು ೫೬೦ ೦೧೮
ದೂ : ೬೬೧೩೧೨೩, ೬೬೧೮೭೫೨

## ಅಧ್ಯಾಯ : ಮೂರು

# ಹತ್ತೊಂಬತ್ತನೇ ಶತಮಾನದ ದಕ್ಷಿಣಕನ್ನಡದಲ್ಲಿ ರೈತ ಬಂಡಾಯಗಳು

ಈ ಲೇಖನದಲ್ಲಿ ವಸಾಹತುಶಾಹಿಯ ಮೊದಲ ದಿನಗಳಲ್ಲಿ ದಕ್ಷಿಣಕನ್ನಡದಲ್ಲಿ ಉಂಟಾದ ರೈತ ಅಶಾಂತಿಯನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.[೧] ಈ ಪ್ರದೇಶದ ರೈತರು ೧೮೦೯-೧೧ರಲ್ಲೂ ಒಂದು ಕರನಿರಾಕರಣ ಚಳವಳಿಯನ್ನು ಹೂಡಿದ್ದರು. ಎರಡು ದಶಕಗಳ ಅನಂತರ ೧೮೩೦-೩೧ರಲ್ಲಿ ಒಂದು ದಂಗೆಯನ್ನೇ ಎಬ್ಬಿಸಿದರು. ಅದು ಹಿಂದಿನ ಚಳವಳಿಗಿಂತ ಬಹುಪಾಲು ಉಗ್ರವಾಗಿದ್ದಿತು, ಸುವ್ಯವಸ್ಥಿತ ವಾಗಿದ್ದಿತು, ವ್ಯಾಪಕವಾಗಿ ಹರಡಿದ್ದಿತು. ಈ ಎರಡೂ ಪ್ರತಿಕ್ರಿಯೆಗಳು ಅದೇ ವಸಾಹತುಶಾಹಿಯ ಸಂದರ್ಭದಲ್ಲೇ ಸಂಭವಿಸಿದುದಾದರೂ ಸ್ವರೂಪದಲ್ಲಿ ಮತ್ತು ಪ್ರಮಾಣದಲ್ಲಿ ಅವು ಬೇರೆಬೇರೆಯಾಗಿದ್ದುವು. ೧೮೩೦-೩೧ರ ವೇಳೆಗೆ ವಸಾಹತು ಆಡಳಿತದ ಮೊನಚು ರೈತರ ಅನುಭವಕ್ಕೆ ಚೆನ್ನಾಗಿಯೇ ಬಂದಿದ್ದಿತು. ಹಾಗಾಗಿ ಅವರ ಪ್ರತಿಕ್ರಿಯೆಯೂ ೧೮೦೯-೧೧ಕ್ಕಿಂತ ಹೆಚ್ಚು ತೀವ್ರರೂಪದ್ದಾಗಿದ್ದಿತು. ಅಲ್ಲದೆ ದಕ್ಷಿಣ ಕನ್ನಡದ ರೈತರು ೧೮೩೭ರಲ್ಲಿ  ಕಲ್ಯಾಣಸ್ವಾಮಿಯ ದಂಗೆಗೆ ಬೆಂಬಲ ನೀಡಿದರು. ರೈತರ ಬಂಡಾಯವೆಂದು ಅದನ್ನು ಪರಿಗಣಿಸುವುದು ಸಾಧ್ಯವಿಲ್ಲ. ಆದರೂ ರೈತರ ಬಂಡಾಯದ ಲಕ್ಷಣಗಳಿದ್ದುವು.

### ೧೮೦೯-೧೧ರ ಕರನಿರಾಕರಣ ಚಳವಳಿ

ಈ ಅಶಾಂತಿಯು ರೈತರ ಸಾಮೂಹಿಕ ದಂಗೆಯ ವರ್ಗಕ್ಕೆ ಸೇರುತ್ತದೆ. ಕೆಥಲೀನ್‌ಗೋ ಹೇಳುವಂತೆ ರೈತರು ದಂಗೆಯೆದ್ದುದು ನಿರ್ದಿಷ್ಟ ಅನ್ಯಾಯಗಳ ಪರಿಹಾರಕ್ಕಾಗಿ. ಮೂಲತಃ ಇವು ಜಾತ್ಯತೀತ ಲಕ್ಷಣವುಳ್ಳವು ಒಬ್ಬ ಆಕರ್ಷಕ ನಾಯಕನೆಂಬುವವನು ಇಲ್ಲದ;  ಮೊದಮೊದಲಲ್ಲಿ ಶಾಂತಿಯುತ ಬಹಿಷ್ಕಾರಗಳು, ಪ್ರದರ್ಶನಗಳು ಮೊದಲಾದ ಸುಧಾರಕ ಸ್ವರೂಪದಿಂದಿದ್ದು, ಕೊನೆಗೆ ಉಗ್ರ ಹೋರಾಟದಲ್ಲಿ ಮುಗಿಯುವಂಥವು, ಅವರ ವಿರುದ್ಧ ಅಪರಾಧಗಳ ಆಪಾದನೆ ಹೊರಿಸುವಂತೆ ಆಗುವವು.[೨] ಈ ರೈತ ಅಶಾಂತಿಯಲ್ಲಿ ಮುಖ್ಯವಾದ ಅಂಶ ಭೂಕಂದಾಯ. ಕೆನರಾ ಮತ್ತು ಸೂಂದಾ ಪ್ರಾಂತಗಳ ಮೊದಲ ಕಲೆಕ್ಟರ್ ಸರ್ ಥಾಮಸ್ ಮುನ್ರೋ, ಮೈಸೂರು ತೆರಿಗೆ ಪದ್ಧತಿಯನ್ನು ಸರ್ವಥಾ ಒಪ್ಪಿರಲಿಲ್ಲವಾದರೂ ಅದನ್ನು ಬದಲಾಯಿಸಲು ತಾನು ಸ್ವತಂತ್ರನಲ್ಲನೆಂದು ಭಾವಿಸಿದನು. ತೆರಿಗೆಯ ಸಂಗ್ರಹವನ್ನು ಸುಗಮಗೊಳಿಸಲು ಅತ್ಯಗತ್ಯವಾಗಿ ಬೇಕಾಗಿದ್ದ ಟೀಪುಸುಲ್ತಾನನು ತೋರಿಸಿದ್ದ ಇಳಿತಾಯಗಳನ್ನು ಮಾತ್ರವೇ ಅವನೂ ತೋರಿಸಿದನು. ಅದಕ್ಕಿಂತ ಬೇರೆ ರಿಯಾಯಿತಿಯನ್ನು ಪ್ರಕಟಿಸಲಿಲ್ಲ.[೩]

ಇದರ ಫಲವಾಗಿ, ಕಂಪೆನಿ ಸರಕಾರವು  ಸಂಗ್ರಹಿಸುತ್ತಿದ್ದ ತೆರಿಗೆ ಬಹು ಹೆಚ್ಚಿನದಾಗಿಯೇ ಮುಂದುವರಿಯಿತು.  ಈ ಅರ್ಥದಲ್ಲಿ ಈ ರೈತ ಅಶಾಂತಿಯನ್ನು ಒಂದು 'ತೆರಿಗೆ ಬಂಡಾಯ' ಎಂದು

ಪರಿಗಣಿಸಬಹುದು. ಎರಿಕ್ ಸ್ಟೋಕ್ಸ್ ಭಾರತದ ೧೮೫೦ರ ರೈತರ ಹಿಂಸಾಚಾರವನ್ನು ವರ್ಣಿಸಲು ಈ ಪದವನ್ನು ಉಪಯೋಗಿಸಿದನು.[೪] ಇಲ್ಲೂ ಮುಖ್ಯವಾಗಿದ್ದುದು ಭೂಕಂದಾಯ. ರೈತರಿಗೂ ಕಂಪೆನಿ ಸರಕಾರಕ್ಕೂ ನಡುವೆ ನಡೆದ ಘರ್ಷಣೆಗೆ ಅದೇ ವಸ್ತುವಾಯಿತು. ಈ ದೃಷ್ಟಿಯಿಂದ ಈ ರೈತ ಅಶಾಂತಿಯು ಮಧ್ಯಕಾಲೀನ ಭಾರತದಲ್ಲಿ ನಡೆದ ರೈತ ಬಂಡಾಯಗಳನ್ನು ಸ್ಥೂಲವಾಗಿ ಹೋಲುತ್ತದೆ. ಮುಖ್ಯ ಭಿನ್ನಾಭಿಪ್ರಾಯಕ್ಕೆ ಹಾಗೂ ಇತರ ಅಶಾಂತಿಗಳಿಗೆ ಕಾರಣ ಭೂಕಂದಾಯವೇ ಆಗಿತ್ತು. ಮಿಕ್ಕೆಲ್ಲ ಅಂಶಗಳೂ ಗೌಣವಾಗಿದ್ದುವು.[೫] ಈ ಪ್ರದೇಶದ ರೈತರು ತೆರಿಗೆಯ ದಮನಕಾರೀ ಸ್ವರೂಪದ ವಿರುದ್ಧವಾಗಿ ಹೋರಾಡಿದರೇ ಹೊರತು, ರಾಜಕೀಯ ಸ್ತರದಲ್ಲಿ ಅವರು ಬ್ರಿಟಿಷರೊಂದಿಗೆ ಕಾದಲಿಲ್ಲ. ರೈತರ ರಾಜಕೀಯ ಪ್ರಜ್ಞೆಯನ್ನು ಮೇಲಿನ ಸ್ತರದಿಂದ ರೂಪಿಸಬೇಕಾಗಿತ್ತು; ರಾಷ್ಟ್ರೀಯತೆ ಆಂದೋಲನದ ಒತ್ತಡದಲ್ಲಿ ಅದು ನಿಧಾನವಾಗಿ ರೈತವರ್ಗಕ್ಕೆ ಇಳಿದು ಬಂದಿತು. ಅವರಲ್ಲಿ ಕ್ರಾಂತಿಕಾರಕ ವಿಚಾರಗಳು ಮೂಡುವಂತೆ ಮಾಡಲು ಬುದ್ಧಿಜೀವಿಗಳು ಮಧ್ಯವರ್ತಿಗಳಾಗಿ ವರ್ತಿಸಿದರು.[೬]

೧೮೦೯-೧೧ರ ರೈತ ಅಶಾಂತಿಯನ್ನು ಭೂಕಂದಾಯ ವ್ಯವಸ್ಥೆ ಮತ್ತು ಪ್ರಸಕ್ತ ಅಧ್ಯನಾವಧಿಯಲ್ಲಿ ಕಂಪೆನಿ ಸರಕಾರವು ನಡೆಸುತ್ತಿದ್ದ ಆಡಳಿತ ಇವುಗಳ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕು. ಈ ಪ್ರದೇಶದಲ್ಲಿ ನೆಲವು ಖಾಸಗಿ ಆಸ್ತಿಯಾಗಿಯೇ ಬಹುಕಾಲದಿಂದ ಬಂದಿದ್ದುದರಿಂದ[೭] ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯು ಇಲ್ಲಿ ರಯತ್‌ವಾರಿ ಕಂದಾಯ ಪದ್ಧತಿಯನ್ನು ಜಾರಿಗೆ ತಂದಿತು. ಅದು ಈ ಪ್ರಾಂತದ ಮೊದಲನೆಯ ಕಲೆಕ್ಟರ್ ಸರ್ ಥಾಮಸ್ ಮುನ್ರೋನ ಚಿಂತನೆಯ ಕೂಸು. ಯಾರು ಜಮೀನಿನ ಮೇಲೆ ಒಡೆತನದ ಹಕ್ಕನ್ನು ಅಂದರೆ, ಮೂಲವರ್ಗವನ್ನು ಹೊಂದಿದ್ದಾರೆಯೋ ಅವರು, ವಾಸ್ತವವಾಗಿ ಬೇಸಾಯ ಮಾಡುತ್ತಿರಲಿ, ಬಿಡಲಿ, ಕಂದಾಯವನ್ನು ಪಾವತಿ ಮಾಡತಕ್ಕದ್ದು. ಹಾಗೆ ನೋಡಿದರೆ, ಅನೇಕ ರೈತರು ಜಮೀನ್ದಾರರಾಗಿದ್ದ, ತಮ್ಮ ಜಮೀನುಗಳನ್ನು ಮೂಲಗೇಣಿ[೮], ಚಲಗೇಣಿ[೯], ವಾಯ್ದೆ ಗೇಣಿ[೧೦] ಮೊದಲಾದ ಹಿಡುವಳಿ ಪದ್ಧತಿಗಳ ಪ್ರಕಾರ ಗೇಣಿದಾರರಿಗೆ ಗುತ್ತಿಗೆಗೆ ಕೊಡುತ್ತಿದ್ದರು. ಇದರ ಫಲವಾದ ಕೃಷಿವ್ಯವಸ್ಥೆ ಹಾಗೂ ಕೃಷಿ ಸಂಬಂಧಗಳಲ್ಲಿ ಜಮೀನುದಾರರು ಮತ್ತು ಸಾಹುಕಾರರು ಬಡರೈತರನ್ನು ಶೋಷಿಸಲು ಬೇಕಾದಷ್ಟು ಅವಕಾಶಗಳು ಒದಗಿದುವು. ಕಂದಾಯಾಡಳಿತದಲ್ಲಿ ಕಂಡುಬಂದ ಬಹುದೊಡ್ಡ ದೋಷವೆಂದರೆ, ಜಮೀನನ್ನು ಸರ್ವೆ ಮಾಡಲು ಸರಿಯಾದ ವ್ಯವಸ್ಥೆ ಇರದುದು. ಇದರ ಫಲವಾಗಿ ಅತಿರೇಕದ ಕಂದಾಯ ನಿಗದಿ ಮತ್ತು ಅದರಲ್ಲಿ ವಿಪರೀತ ತಾರತಮ್ಯಗಳು ಕಂಡುಬಂದುವು. ಅನೇಕ ಸಂದರ್ಭಗಳಲ್ಲಿ ಬ್ರಿಟಿಷರು ಮೊದಲಿನಿಂದ ಇದ್ದ ಸ್ಥೂಲವೂ, ಸಿದ್ಧವೂ ಆದ ಬೀಜವರಿ ವ್ಯವಸ್ಥೆಯನ್ನೇ[೧೧] ಮುಂದುವರಿಸಿದರು. ನೆಲವನ್ನು ಸಮಗ್ರವಾಗಿ ಸರ್ವೆ ಮಾಡಲಿಲ್ಲ, ವರ್ಗೀಕರಿಸಲಿಲ್ಲ. ಕಂದಾಯ ನಿಗದಿಯಲ್ಲಾದ ಇನ್ನೊಂದು ದೋಷ ಜಮಾಬಂದಿಬೆಲೆ[೧೨] ಅಥವಾ ಸರಕಾರವು ಕೃಷಿ ಉತ್ಪನ್ನಗಳಿಗೆ ಕಟ್ಟುತ್ತಿದ್ದ ಬೆಲೆಯು ಅನೇಕ ವೇಳೆ ಮಾರುಕಟ್ಟೆಯ ಬೆಲೆಗಿಂತ ಅಧಿಕವಾಗಿರುತ್ತಿದ್ದುದು.[೧೩] ಅಂತಹ ಸಂದರ್ಭಗಳಲ್ಲಿ ಸರಕಾರಕ್ಕೆ ತೆರಿಗೆ ಪಾವತಿ ಮಾಡುವ ಸಲುವಾಗಿ ತಾವು ಬೆಳೆದುದ್ದರ ಬಹುಭಾಗವನ್ನು ಮಾರಿಬಿಡಬೇಕಾಗುತ್ತಿತ್ತು.

ವಸಾಹತು ಸರಕಾರವು, ದಕ್ಷಿಣಕನ್ನಡದಲ್ಲಿ ಸ್ಥಾಪಿತವಾದಾಗಿನಿಂದ ಕಂದಾಯವನ್ನು ವಸ್ತುರೂಪದಲ್ಲಲ್ಲದೆ ನಗದಾಗಿಯೇ ಪಾವತಿ ಮಾಡಬೇಕೆಂದು ಒತ್ತಾಯಪಡಿಸಿತು. ೧೭೯೯ರಲ್ಲಿ ಬ್ರಿಟಿಷರು ವಹಿಸಿಕೊಳ್ಳುವುದಕ್ಕೆ ಮೊದಲು ಎರಡೂ ಬಗೆಯ ಕಂದಾಯ ಪಾವತಿ ರೂಢಿಯಲ್ಲಿತ್ತು.[೧೪] ಸರಕಾರದ ಕಂದಾಯ ಬೇಡಿಕೆಯನ್ನು ಪೂರೈಸಲು ರೈತರು ಸಾಮಾನ್ಯವಾಗಿ ತಮ್ಮ ಜಮೀನನ್ನು ಒತ್ತೆಯಿಡಬೇಕಾಗಿತ್ತು, ಇಲ್ಲವೇ ಮಾರಬೇಕಾಗಿತ್ತು. ಕಂದಾಯ ಬಾಕಿಯನ್ನು ವಸೂಲಿ ಮಾಡಲು ಸಾಮಾನ್ಯವಾಗಿ ಸರಕಾರವು ರೈತರ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದಿತು ಮತ್ತು ಬಹಿರಂಗವಾಗಿ ಹರಾಜು ಮಾಡುತ್ತಿದ್ದಿತು.

ಹೆಚ್ಚುಕಡಮೆ ಪ್ರತಿವರ್ಷವೂ ಸರಕಾರವು ತೋರಿಸುತ್ತಿದ್ದ ಅಲ್ಪ ವಿನಾಯಿತಿಗಳು ನಿಜವಾಗಿ ರೈತರಿಗೆ ಸಹಾಯಕವಾಗಿರಲಿಲ್ಲ. ಇನ್ನೂ ಕೇಡೆಂದರೆ ಈ ವರ್ಷ ತೋರಿಸಿದ ವಿನಾಯಿತಿಯ ಮೊತ್ತವನ್ನು ಮುಂದಿನ ವರ್ಷ ವಸೂಲು ಮಾಡಿಬಿಡುತ್ತಿದ್ದರು. ನೀರಾವರಿಯಂತಹ ಅಭಿವೃದ್ಧಿ ಕಾಮಗಾರಿಗಳ ವಿಷಯದಲ್ಲಿ ಸರಕಾರವು ತೋರಿಸುತ್ತಿದ್ದ ನಿರಾಸಕ್ತಿಯು ರೈತರ ಸಂಕಷ್ಟಗಳನ್ನು ಇನ್ನಷ್ಟು ಹೆಚ್ಚಿಸುತ್ತಿತ್ತು. ಇವೆಲ್ಲದರ ಒಟ್ಟು ಪರಿಣಾಮ, ಪ್ರಸಕ್ತ ಲೇಖಕನು ಬೇರೊಂದೆಡೆ ತೋರಿಸಿರುವಂತೆ,[೧೫] ಕೃಷಿಯಲ್ಲಿ ಕುಸಿತ ಮತ್ತು ರೈತರಲ್ಲಿ ಬಡತನ ಉಂಟಾದದ್ದು.

ಮೇಲೆ ವರ್ಣಿಸಿದ ಸಾಮಾನ್ಯ ಅಂಶಗಳಲ್ಲದೆ, ಈ ರೈತ ಅಶಾಂತಿಯು ಸಿಡಿದುದಕ್ಕೆ ಕೆಲವು ನಿರ್ದಿಷ್ಟ ಕಾರಣಗಳೂ ಇದ್ದುವು. ಕಂಪೆನಿ ಸರಕಾರವು ಸಂಗ್ರಹಿಸುವ ಕಂದಾಯವು ವರ್ಷದಿಂದ ವರ್ಷಕ್ಕೆ ಏರುತ್ತಾ ಹೋಯಿತು. ಆದರೂ ರೈತರು ಹೇಗೋ ಕಷ್ಟಪಟ್ಟು ೧೮೦೬ರ ವರೆಗೂ ಕೊಡುತ್ತಾ ಹೋದರು. ಅಲ್ಲಿಂದ ಮುಂದಕ್ಕೆ ಸರಕಾರದ ಬೇಡಿಕೆಯನ್ನು ಪೂರೈಸುವುದು ಅವರಿಗೆ ಸಾಧ್ಯವಾಗಲಿಲ್ಲ. ೧೮೦೮ರಲ್ಲಿ ಕಲೆಕ್ಟರ್ ಅಲೆಗ್ಸಾಂಡರ್ ರೀಡ್ ಹೀಗೆ ವರದಿ ಮಾಡಿದನು. ''...೧೭೯೯ರಿಂದ ಭೂಕಂದಾಯದಲ್ಲಾಗುತ್ತಿದ್ದ ಹೆಚ್ಚಳವು ಮೊದಲ ಏಳು ವರ್ಷಗಳವರೆಗೆ ಮಿತವಾಗಿರುತ್ತಿತ್ತು. ಸಮಯಕ್ಕೆ ಸರಿಯಾಗಿ ಕಂದಾಯ ವಸೂಲಾತಿಯಾಗುತ್ತಿತ್ತು. ಈಗ ಕಳೆದ ಎರಡು ವರ್ಷಗಳಿಂದ ಬಾಕಿ ಕಾಣಿಸಿಕೊಳ್ಳುತ್ತಿದೆ.''[೧೬] ಅದೇ ವರದಿಯಲ್ಲಿ ರೀಡನು ಕಂದಾಯದ ಸಕ್ರಮ ವಸೂಲಿಗಾಗಿ ಒಂದು ಕಾನೂನು ಮಾಡುವುದು, ಕ್ಷಿಪ್ರವಾಗಿ ಕೆಲಸ ಮಾಡುವುದು, ರೆವಿನ್ಯೂ ಕಚೇರಿಗಳಲ್ಲಿ ರೈತರು ಕಲೆಕ್ಟರರಿಗೆ ಗೌರವ ಕೊಡುವುದು, ಮುಖ್ಯ ಕಂದಾಯಾಧಿಕಾರಿಗಳು ಸಾರ್ವಜನಿಕ ಸಮಾರಂಭಗಳಿಗೆ ಸಂಬಂಧಿಸಿದಂತೆ ವಿವಾದಾಸ್ಪದ ಹೇಳಿಕೆಗಳನ್ನು ನೀಡದಂತೆ ತಡೆಯುವುದು – ಈ ಶಿಫಾರಸುಗಳನ್ನೂ ಮಾಡಿದನು.[೧೭]

೧೮೧೧ರಲ್ಲಿ ಹೊಸ ತೆರಿಗೆಗಳ ವಿರುದ್ಧವಾಗಿ ರೈತರು ದೂರುತ್ತಿದ್ದರೆ, ಉಪ್ಪು ಮತ್ತು ಹೊಗೆಸೊಪ್ಪುಗಳ ಏಕಸ್ವಾಮ್ಯವನ್ನು ದ್ವೇಷಿಸುತ್ತಿದ್ದಾರೆ, ಬ್ರಿಟಿಷ್ ನ್ಯಾಯಪದ್ಧತಿಯನ್ನೂ ಛಾಪಾಕಾಗದಗಳ ಬಳಕೆಯನ್ನೂ ವಿರೋಧಿಸುತ್ತಿದ್ದಾರೆ ಎಂದು ರೀಡ್ ವರದಿ ಮಾಡಿದನು.[೧೮] ರೈತರ ವಿರೋಧವನ್ನು ಕಟ್ಟಿಕೊಟ್ಟ ಇನ್ನೊಂದು ಅಂಶ ಪ್ರಸ್ತುತ ಅಧ್ಯಯನಾವಧಿಯಲ್ಲಿ ಮದರಾಸ್ ಪ್ರೆಸಿಡೆನ್ಸಿಯಲ್ಲಿ ಆದ್ಯಂತ ಪ್ರಚುರವಾಗಿದ್ದ ಆರ್ಥಿಕ ಕುಸಿತ (ಅಡಿ ಟಿಪ್ಪಣಿ ೩೪ ಮತ್ತು ೩೫ ನೋಡಿ). ದಕ್ಷಿಣ ಕನ್ನಡದಲ್ಲೂ ಮುಖ್ಯ ಆಹಾರ ಧಾನ್ಯವಾದ ಅಕ್ಕಿ ಮತ್ತು ಇತರ ಕೃಷಿ ಉತ್ಪನ್ನಗಳಾದ ಮೆಣಸು, ಏಲಕ್ಕಿ ಮತ್ತು ತೆಂಗಿನಕಾಯಿ ಮೊದಲಾದವುಗಳ ಮಾರುಕಟ್ಟೆಯಲ್ಲಿ ಗಣನೀಯವಾದ ಕುಸಿತವುಂಟಾಯಿತು. ಈ ಎಲ್ಲಾ ವಸ್ತುಗಳನ್ನೂ ಅವರು ಸರಾಸರಿ ನ್ಯಾಯಬೆಲೆಗಿಂತ ಅಗ್ಗವಾದ ಬೆಲೆಗೆ ಮಾರಾಟ ಮಾಡಬೇಕಾಯಿತು.[೧೯] ಈ ಮಾರಾಟದ ಸರಕುಗಳಿಗೆ ಬೇಡಿಕೆ ಕುಸಿದುದಕ್ಕೆ ಕಾರಣ ಬಹು ಸಂಖ್ಯೆಯಲ್ಲಿ ಸೈನಿಕರನ್ನೂ ಇತರ ಯೂರೋಪಿಯನ್ ಜನರನ್ನೂ ಈ ಪ್ರದೇಶದಿಂದ ವರ್ಗ ಮಾಡಿದುದು. ಅನೇಕ ಯುರೋಪಿಯನ್ ಮತ್ತು ದೇಶೀಯ ಕಚೇರಿಗಳನ್ನೂ ರದ್ದುಪಡಿಸಿದ್ದರಿಂದ ಹಾಗೂ ಸೈನ್ಯವನ್ನು ಕಡಮೆ ಮಾಡಿದ್ದರಿಂದ ಸಂಬಾರ ವಸ್ತುಗಳ ಬಳಕೆಯಲ್ಲಿ ಕುಸಿತವುಂಟಾಯಿತು.[೨೦]

ಇವುಗಳ ಜೊತೆಗೆ, ೧೮೦೯-೧೧ರ ಕ್ಷಾಮದಿಂದ ಬೇಸಾಯವು ಸೊರಗಿದ್ದರೂ, ಹಿಂದಿನ ವರ್ಷದ ದಾಸ್ತಾನು ಮಾರಾಟವಾಗದೆ ಹಾಗೆಯೇ ಉಳಿದಿತ್ತು.[೨೧] ರೀಡನ ೧೮೧೧ರ ವರದಿಯು ಕೃಷಿಯ ಮತ್ತು ಕೃಷಿಕರ ಬಡತನವನ್ನು ಹೀಗೆ ವರ್ಣಿಸಿತು: ''ಸುಧಾರಣೆಯ ಕುರುಹುಗಳನ್ನು ನಾನು ಎಲ್ಲಿಯೂ ಗಮನಿಸಲಿಲ್ಲ ಎಂದು ತಿಳಿಸಲು ವಿಷಾದಿಸುತ್ತೇನೆ. ನಾನು ತಂಗಿದ ಎಲ್ಲಾ ಸ್ಥಳಗಳಲ್ಲೂ ಕೆಲವು ವರ್ಷಗಳ ಹಿಂದಿದ್ದುದಕ್ಕಿಂತಲೂ ಹೆಚ್ಚು ಹೀನವಾದ, ದಾರಿದ್ರ್ಯದ ಚಿತ್ರವನ್ನೇ ನಾನು ನೋಡಿದೆ.''[೨೨] ಅದೇ ವರ್ಷ, ಮತ್ತೆ ರೀಡ್ ಹೇಳಿದನು: ಅವರ (ರೈತರ) ಪ್ರಸ್ತುತ ಪರಿಸ್ಥಿತಿಯನ್ನು ಗಮನಿಸಿದರೆ, ಉತ್ತಮನೀತಿಗೆ ಹೊಂದಿಕೆಯಾಗುವುದಕ್ಕಿಂತಲೂ

ಅತಿಯಾದ ಪ್ರಮಾಣದಲ್ಲಿ ನಾವು ಅವರಿಂದ ತೆರಿಗೆಯನ್ನು ಕಿತ್ತುಕೊಳ್ಳುತ್ತಿದ್ದೇವೆ ಎಂದು ಹೇಳಲು ನನಗೆ ಸಂಕೋಚವಿಲ್ಲ. ಖಾಯಂ ನಿಗದಿಯನ್ನು ಆದೇಶಿಸಿದಾಗಲೆಲ್ಲ ಅದು ಈಗಿರುವುದಕ್ಕಿಂತಲೂ ಹೆಚ್ಚಿನದಾಗಿದ್ದು ಸರಕಾರದ ಆಶೋತ್ತರಗಳನ್ನು ಪೂರೈಸುತ್ತಿದೆ.[೨೩] ೧೮೧೧ರಲ್ಲಿ ರೀಡ್ ವರದಿ ಮಾಡಿದನು: ''ಕೆನರಾ ಮತ್ತು ಸೂಂದಾಗಳಲ್ಲಿ ಕೃಷಿಯು ಅಪೇಕ್ಷಿತ ಪ್ರಮಾಣದಲ್ಲಿ ಉತ್ತಮಗೊಳ್ಳುತ್ತಿಲ್ಲ ಎನ್ನುವುದು ನಿಜ. ಇದಕ್ಕಿಂತ ಹೆಚ್ಚು ಬಿರುಸಾದ ರೀತಿಯಲ್ಲಿ ತೆರಿಗೆ ಸಂಗ್ರಹಿಸುವುದು ಹಿತವಾಗಿರುವುದಿಲ್ಲ, ಸರಕಾರಕ್ಕೆ ಅದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಜನರ ದೃಷ್ಟಿಯಿಂದ ಹೇಳುವುದಾದ ಪಕ್ಷದಲ್ಲಿ, ಅವರಲ್ಲಿ ಹೆಚ್ಚುಪಾಲು ಕೆಲವು ವರ್ಷಗಳ ಹಿಂದೆ ಇದ್ದಷ್ಟು ಸ್ಥಿತಿವಂತರೂ ಆಗಿಲ್ಲ ಇಂದು. ಇದಕ್ಕೆ ಅವರು ಕೊಡುವ ಕಾರಣ, ಅದು ನ್ಯಾಯವಾಗಿದೆಯೆಂದು ನಾನೂ ಒಪ್ಪುತ್ತೇನೆ, ವ್ಯಾಪಾರದಲ್ಲಿ ಉಂಟಾಗಿರುವ ಕುಸಿತ, ಅದೇ ಸಮಯಕ್ಕೆ ವಸೂಲಾತಿಯಲ್ಲಿ ಆಗಿರುವ ಹೆಚ್ಚಳ.''[೨೪]

ಈ ರೈತ ಬಂಡಾಯದ ಸ್ವರೂಪ, ವ್ಯವಸ್ಥೆ, ನಾಯಕತ್ವ, ಪ್ರಾದೇಶಿಕ ವ್ಯಾಪ್ತಿ ಮತ್ತು ಇತರ ವಿವರಗಳನ್ನು ಆಡಳಿತೀಯ ದಾಖಲೆಗಳು ಅಷ್ಟಾಗಿ ಕೊಡುವುದಿಲ್ಲ. ೧೮೯೦ ಏಪ್ರಿಲ್ ೩೦ರ ರೀಡನ ವರದಿಯು, ರೈತರು ಒಟ್ಟುಗೂಡಿ ಕಿಸ್ತುಗಳನ್ನು, ಅಂದರೆ ಸರಕಾರಕ್ಕೆ ಸಲ್ಲಬೇಕಾದ ಕಂದಾಯವನ್ನು ತಡೆಹಿಡಿಯುವುದಕ್ಕೆ ತೊಡಗಿದ್ದಾರೆ ಎಂಬುದನ್ನು ಒಪ್ಪುತ್ತದೆ. ೧೮೯೦ರಲ್ಲಿ ತಾನು ಪ್ರವಾಸ ಹೋದಾಗ ಮತ್ತು ತಂಗಿದ ಎಡೆಗಳಲ್ಲಿ ಎಂದಿನಂತೆ ರೈತರು ಹಾಜರಿರಲಿಲ್ಲ, ಮೊದಲೂ ಇದು ತನ್ನ ಅನುಭವಕ್ಕೆ ಬಂದಿದ್ದಿತು ಎಂಬುದನ್ನೂ ಅವನು ಅದರಲ್ಲಿ ಹೇಳಿದನು. ಯಾವಾಗಲೂ ರೈತರು ಬಂದು ಕೂಡುವುದಕ್ಕೆ ಕಾಯುವುದರಲ್ಲಿಯೇ ಸಮಯ ಹಾಳಾಗುತ್ತಿದೆ. ಎಂದೂ ಅವನು ಅಭಿಪ್ರಾಯಪಟ್ಟನು.[೨೫] ಮಂಗಳೂರಿನಲ್ಲಿ ಇನ್ನೊಂದು ನ್ಯಾಯಾಲಯವನ್ನು ಮರಳಿ ಸ್ಥಾಪಿಸುವ ಅಗತ್ಯವಿದೆಯೆಂದೂ, ಅದರಿಂದ ಸ್ಥಳೀಯ ಮೊಕದ್ದಮೆಗಳನ್ನು ಪರಿಣಾಮಕಾರಿಯಾಗಿ ವ್ಯವಹರಿಸಲು ಸಾಧ್ಯವಾಗುವುದೆಂದೂ, ಇನ್ನೊಂದು ನ್ಯಾಯಾಲಯವಿರುವುದು ಉತ್ತರ ವಿಭಾಗದ ಹೊನ್ನಾವರ ದಲ್ಲಾದುದರಿಂದ ದೂರವಾಗುತ್ತದೆಂದೂ ಹೇಳಿದನು.[೨೬] ೧೮೯೦ ಮೇ ೧೩ರ ವರದಿಯಲ್ಲಿ, ತೆರಿಗೆಯನ್ನು ವಸೂಲು ಮಾಡುವುದರಲ್ಲಿ ಕಾನೂನು ಪ್ರಕಾರ ಕಟ್ಟುನಿಟ್ಟಾಗಿ ನಡೆಯಲು ಇಚ್ಛಿಸುವುದಾಗಿಯೂ, ಮೊದಲು ಮುಖ್ಯ ರೈತರ ಮೇಲೆ ಕಾನೂನು ಕ್ರಮಗಳನ್ನು ತೊಡಗುವುದಾಗಿಯೂ ಅವರೇ ಇತರರನ್ನು ಈ ಕಾನೂನು ಬಾಹಿರ ಸ್ಥಿತಿಗೆ ರಹಸ್ಯವಾಗಿ ಪ್ರೇರೇಪಿಸುತ್ತಿರುವುದರಿಂದ ಅವರನ್ನು ಮೊದಲು ಶಿಕ್ಷೆಗೊಳಪಡಿಸಬೇಕಾಗಿದೆ ಯೆಂದೂ ಹೇಳಿದನು.[೨೭] ಕಲೆಕ್ಟರನ ಈ ಹೇಳಿಕೆಗಳು ಅರ್ಥಪೂರ್ಣವಾಗಿವೆ. ಏಕೆಂದರೆ ಅದು ಬಂಡಾಯದ ನಾಯಕತ್ವವನ್ನು ಪ್ರಮುಖ ರೈತರು ಅಥವಾ ಶ್ರೀಮಂತ ರೈತರು ವಹಿಸಿದ್ದರು ಎನ್ನುವುದನ್ನು ಸೂಚಿಸುತ್ತದೆ.

ರೈತರು ಕರನಿರಾಕರಣ ಚಳವಳಿ ಹೂಡಿದುದು, ಅವರು ಹಗ್ಗದ ಕೊನೆಗೆ ಬಂದು ಬಿಟ್ಟಿದ್ದರು ಎನ್ನುವುದನ್ನು ಸ್ಪಷ್ಟವಾಗಿ ತೋರಿಸಿತು. ಕಂದಾಯದಲ್ಲಿ ಅವರು ವಿನಾಯಿತಿಯನ್ನು ಕೋರಿದರು. ಬಹಿರಂಗ ಪ್ರತಿಭಟನೆಯ ಮೂಲಕ ತಮ್ಮ ಬೇಡಿಕೆಯು ಸರಕಾರದ ಗಮನಕ್ಕೆ ಬರುವಂತೆ ಮಾಡಲು ಆಶಿಸಿದರು. ಈ ವರ್ಷಗಳಲ್ಲಿ ದಕ್ಷಿಣ ಕನ್ನಡದಲ್ಲಿ ಭೂಕಂದಾಯದ ವಸೂಲಾತಿ ಮೊತ್ತವು ಇಳಿದುಹೋದದ್ದೇ ಚಳವಳಿಯ ಮಹತ್ವವನ್ನು ಪ್ರತಿಬಿಂಬಿಸುತ್ತದೆ.[೨೮] ರೈತರು ಆಡಳಿತಗಾರರ ಗಮನವನ್ನೇನೋ ಸೆಳೆದರು. ಮೊದಲೇ ಹೇಳಿದಂತೆ ರೀಡನು ತನ್ನ ವರದಿಯಲ್ಲಿ ಹದಗೆಟ್ಟ ಪರಿಸ್ಥಿತಿಯನ್ನು ಒಪ್ಪಿಕೊಂಡನು. ಆದರೆ, ೧೮೯೦ರ ಕಂದಾಯಬಾಕಿಗೆ ಕಾರಣಗಳನ್ನು ಪಟ್ಟಿಮಾಡಿದಾಗ ಮತ್ತು ಮುಂದೆ ೧೮೧೦-೧೧ರಲ್ಲಿ ರೈತ ಬಂಡಾಯವನ್ನು ಅಡಗಿಸಲು ಅವನಿಗೆ ಸರಕಾರವು ಆಜ್ಞೆ ಮಾಡಿದಾಗ ಅವನು ಅತಿರೇಕದ ಕಂದಾಯ ದರದ ಜ್ವಲಂತ ಪ್ರಶ್ನೆಯನ್ನೂ ಉಪ್ಪು ಮತ್ತು ತಂಬಾಕುಗಳ ಏಕಸ್ವಾಮ್ಯವನ್ನು ಗಮನಕ್ಕೆ ತಂದುಕೊಳ್ಳದೆ ಪಕ್ಕಕ್ಕೆ ಸರಿಸಿದನು. ಇದು ವಸಾಹತುಶಾಹಿಯ ಲಕ್ಷಣವೇ ಆಗಿತ್ತು. ೧೮೯೦ ಮೇ ೧೩ನೇ ತಾರೀಕು ಅವನು ತನ್ನ ವರದಿಯಲ್ಲಿ, ರೈತರು ಸರಕಾರಕ್ಕೆ ಕಂದಾಯವನ್ನು ಪಾವತಿ ಮಾಡದಿರುವುದಕ್ಕೆ ಈ ಕೆಳಗಿನ ಕಾರಣಗಳನ್ನು ಕೊಟ್ಟನು.[೨೯]

೧. ತಹಸೀಲ್ದಾರರ ಅಧಿಕಾರ ಮತ್ತು ಪ್ರಭಾವ ಕುಗ್ಗಿದ್ದು.

೨. ಹಲವು ನೆಪಗಳನ್ನು ಒಡ್ಡಿ ತೆರಿಗೆ ಪಾವತಿಯನ್ನು ತಪ್ಪಿಸಿಕೊಳ್ಳಲು ರೈತರು ತೋರಿಸಿದ ಒಲವು.

೩. ನ್ಯಾಯಾಲಯಗಳು, ಕಮಿಶನರರು ಮತ್ತು ಠಾಣೇದಾರರು ಪದೇಪದೇ ಅವರನ್ನು ಕರಿಸಿ ತಡೆಯುಂಟುಮಾಡುತ್ತಿದ್ದುದು,

೪. ೧೮೦೨ರ ನಿಯಮದಲ್ಲಿರುವ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಂಡು ಅದನ್ನು ತೆರಿಗೆ ಬಾಕಿಯ ವಸೂಲಾತಿಗೆ ಅನ್ವಯಿಸಲು ಕಷ್ಟವಾದುದು.

ಇವು ಬ್ರಿಟಿಷ್ ವ್ಯವಸ್ಥೆಯ ಅದಕ್ಷತೆಯನ್ನು ಸೂಚಿಸುತ್ತವೆ. ಆದರೆ, ಕಂದಾಯದ ಬೇಡಿಕೆಯು ಅಧಿಕವಾಗಿದ್ದು, ಅದನ್ನು ಪಾವತಿ ಮಾಡಲು ರೈತರಿಗಿದ್ದ ಸಾಮರ್ಥ್ಯ ಕಡಮೆಯಾಗಿದ್ದ, ಸ್ಪಷ್ಟವಾಗಿ ಕಾಣಿಸುತ್ತಿದ್ದ ಪರಿಸ್ಥಿತಿಯನ್ನು ಈ ಕಾರಣಗಳು ಮುಚ್ಚಿದಾದವು.

೧೮೧೦-೧೧ರಲ್ಲಿ ಬಂಡಾಯವನ್ನು ಅಡಗಿಸಬೇಕಾದಾಗ ರೀಡನು ಹೇಳಿದನು: ''ರೈತರು ನ್ಯಾಯವಲ್ಲದ ವಿನಾಯಿತಿಗಳನ್ನು ಕೇಳುತ್ತಿರುವುದು ರೆವಿನ್ಯೂ ಮಂಡಳಿಗೂ ಸರಕಾರಕ್ಕೂ ವೇದ್ಯವಾಗಿದೆ. ಅವುಗಳನ್ನು ಒಪ್ಪಲು ಸಾಧ್ಯವಿಲ್ಲ. ಪ್ರಸ್ತುತವರ್ಷದ ಕಂದಾಯದಲ್ಲಿ ಸಾಧ್ಯವಾದ ಮಟ್ಟಿಗೆ ಈ ಕೆಳಗಿನ ಅಂಶಗಳನ್ನು ತರಲು ಉದ್ದೇಶಿಸಿದ (೧೮೧೦-೧೧).[೬೦]

೧. ಸಾವು, ವಲಸೆ, ರೋಗ ಅಥವಾ ಬೇರಾವುದೇ ಸಮರ್ಥಿತವಾದ ಸರಿಯಾದ ಕಾರಣದಿಂದ ಪೂರ್ತಿಯಾಗಿ ಬೀಳುಬಿದ್ದ ಭೂಮಿಗೆ ಈ ವರ್ಷ ಕಂದಾಯವನ್ನು ಮನ್ನಾ ಮಾಡಲಾಗಿದೆ.

೨. ಮೇಲ್ಕಂಡ ಕಾರಣಗಳಿಂದ ಅರ್ಧದಷ್ಟು ಭೂಮಿಯನ್ನು ಬೇಸಾಯ ಮಾಡದೆ ಬಿಟ್ಟಿದ್ದರೆ ಅಂಥಕಡೆಗಳಲ್ಲಿ ಅವುಗಳ ತೆರಿಗೆಯಲ್ಲಿ ಈ ವರ್ಷ ಅರ್ಧಭಾಗವನ್ನು ಮಾತ್ರ ಪಾವತಿ ಮಾಡಬಹುದು.

೩. ಕಾಲುಭಾಗ ಮಾತ್ರ ಸಾಗುವಳಿಯಾಗದೆ, ಅದರ ಕಂದಾಯವು ವರ್ಷಕ್ಕೆ ೧೦೦ ಬಹಾದುರಿ ಪಗೋಡ (೪೦೦ ರೂಪಾಯಿ) ಆಗಿದ್ದ ಪಕ್ಷದಲ್ಲಿ, ಉಳಿಕೆ ಮುಕ್ಕಾಲು ಭಾಗ ತೆರಿಗೆಯನ್ನು ಮಾತ್ರ ಪಾವತಿ ಮಾಡಬಹುದು. ಆದರೆ ತೆರಿಗೆಯು ೧೦೦ ಬಹಾದುರಿ ಪಗೋಡಗಳಿಗಿಂತ ಅಧಿಕವಾಗವುದಾದ ಪಕ್ಷದಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ.

೪. ಇಡೀ ಆಸ್ತಿಯ ನಾಲ್ಕನೆ ಒಂದು ಭಾಗವನ್ನು ಮೀರದ ಇತರ ಎಲ್ಲಾ ಬಗೆಯ ಬೀಳು ಭೂಮಿಗಳಿಗೆ ೧೨೧೯ ಫಸ್ಲಿ (ಕ್ರಿ.ಶ. ೧೮೦೯-೧೦) ಯಲ್ಲಿ ಕೊಟ್ಟಿದ್ದಷ್ಟೇ ಕಂದಾಯವನ್ನು ಪಾವತಿ ಮಾಡತಕ್ಕದ್ದು.

೫. ಕಳೆದ ವರ್ಷ ತೋರಿಸಿದ ತಾತ್ಕಾಲಿಕ ವಿನಾಯಿತಿಯಲ್ಲಿ ಅರ್ಧವನ್ನು ಈ ವರ್ಷ ರೈತರು ಕೊಡಬೇಕಾದ ಕಂದಾಯಕ್ಕೆ ಕೂಡಿಸಲಾಗುತ್ತದೆ.

೬. ಯಾರಾದಾರೂ ಖಾಸಗಿ ಆಸ್ತಿಯನ್ನು ನ್ಯಾಯಾಲಯದ ಆದೇಶದ ಪ್ರಕಾರ ಮಾರಾಟ ಮಾಡಿದ್ದರೆ. ನಿರ್ದಿಷ್ಟ ವಿಚಾರಣೆ ಮತ್ತು ಆಸ್ತಿಯ ತಪಾಸಣೆಗಳ ಬಳಿಕ ಕಲೆಕ್ಟರನ ತೀರ್ಪಿನಂತೆ ಅವುಗಳ ಮೇಲೆ ತೆರಿಗೆ ವಿಧಿಸಲಾಗುವುದು.

ಈ ನಿಯಮಗಳನ್ನು ರೈತರ ಮೇಲೆ ಹೇರಿ, ರೀಡನು ಹೇಳಿದನು: ''ಈ ನಿಯಮಗಳನ್ನು ಕಠಾರುವಾಕ್ಕಾಗಿ ಜಾರಿಗೊಳಿಸಿದರೆ, ರೈತರಲ್ಲಿ ಈಗ ಕಂಡುಬರುತ್ತಿರುವ ಕೂಟ ಮನೋಧರ್ಮವನ್ನು ನಾಶಪಡಿಸಿದಂತಾಗುತ್ತದೆ.

ನನ್ನ ಹಾಗು ನನ್ನ ಮುಂದಿನವರ ತೆರಿಗೆ ವಸೂಲಾತಿಯು ಸುಲಭತರವಾಗುತ್ತದೆ ಎನ್ನುವುದು ನನ್ನ ಭಾವನೆಯಾಗಿದೆ.''[೩೧]

ಈ ಬಂಡಾಯವು ಆಡಳಿತಗಾರರ ಗಮನವನ್ನು ಸೆಳೆಯಿತು, ಕ್ಷುಲ್ಲಕ ಪ್ರಮಾಣದ ತಾತ್ಕಾಲಿಕ ವಿನಾಯಿತಿಯನ್ನು ಪ್ರಕಟಿಸಲಾಯಿತು. ಆದರೆ ರೈತರಿಗೆ ಸಹಾಯಕವಾಗುವಂತಹ ಯಾವುದೇ ಖಾಯಂ ಆದ ಕ್ರಮವನ್ನೂ ಸರಕಾರವು ಕೈಗೊಳ್ಳಲಿಲ್ಲ. ಈ ಅಶಾಂತಿಯು ದುರ್ಬಲವಾಗಿ ವ್ಯಕ್ತವಾಯಿತಾದ್ದರಿಂದ ಹೆಚ್ಚಿನ ಯಶಸ್ಸನ್ನು ಸಾಧಿಸಲಿಲ್ಲ. ಒಂದುಗೂಡುವ ಮನೋಧರ್ಮವು ಈ ಪ್ರದೇಶದ ಜನರಲ್ಲಿ ತುಂಬಾ ಇದೆ ಎಂದು ರೀಡ್ ನಂಬುವಂತಾಯಿತು. ಒಂದು ರೀತಿಯಲ್ಲಿ ಇದು ರೈತರಿಗೆ ತರಬೇತಿಯಾಗಿ ಪರಿಣಮಿಸಿತು. ಮತ್ತೆ ಮುಂದೆ ಎರಡು ದಶಕಗಳ ಅನಂತರ ಹೆಚ್ಚುಕಡಮೆ ಅವೇ ಕಾರಣಗಳಿಂದ ಅವರು ಸುವ್ಯವಸ್ಥಿತವಾಗಿ ದಂಗೆಯೇಳಲು ಇದು ತಯಾರಿಯಾಯಿತು.

## ೧೮೩೦-೩೧ರ ರೈತ ಬಂಡಾಯ

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತೀಯ ದಾಖಲೆಗಳಲ್ಲಿ ಈ ರೈತ ದಂಗೆಯನ್ನು ಕೂಟುಗಳು[೩೨] ಎಂದು ಉಲ್ಲೇಖಿಸಲಾಗಿದೆ. ವಸಾಹತುಶಾಹಿ ಆಡಳಿತದಲ್ಲಿ ಮೇಲೆ ವರ್ಣಿಸಿದ ದೋಷಗಳು ೧೮೩೦ರಲ್ಲೂ ಮುಂದುವರಿದಿದ್ದುವು. ಹೆಚ್ಚಿದ ಕಂದಾಯ, ಜಮೀನನ್ನು ಗೇಣಿಗೆ ಉಪಗೇಣಿಗೆ ಕೊಡುವ ಪದ್ಧತಿ, ಬಡರೈತರ ಋಣಭಾರ, ಜಮೀನನ್ನು ಬಹಿರಂಗವಾಗಿ ಹರಾಜು ಮಾಡುವುದು, ವರ್ಗಾಯಿಸುವುದು, ಹಣ ಸಾಲ ಕೊಡುವ ಸಾಹುಕಾರ ವರ್ಗದ ಉದಯ, ತಂಬಾಕು ಮತ್ತು ಉಪ್ಪು ಸ್ವಾಮ್ಯ, ಸುಂಕಗಳು, ಗ್ರಾಮ ತೆರಿಗೆಗಳು, ನ್ಯಾಯಾಲಯ ಮತ್ತು ಸ್ಟಾಂಪು ಶುಲ್ಕಗಳು ಇತ್ಯಾದಿ ಅಂಶಗಳು ರೈತರ ಮೇಲೆ ತಾಳಲಾರದ ಭಾರವಾದುವು. ಇವಲ್ಲದೆ, ರೈತರ ಪರಿಸ್ಥಿತಿಯು ನಿಜಾವಾಗಿಯೂ ದುಸ್ತರವಾಗುವಂತೆ ಮಾಡಿದ ಕೆಲವು ನಿರ್ದಿಷ್ಟ ಅಂಶಗಳಿದ್ದುವು.

ಮೊದಲನೆಯದಾಗಿ ಮತ್ತು ಅತಿಮುಖ್ಯವಾಗಿ ೧೮೨೭-೩೦ರಲ್ಲಿ ಅಕ್ಕಿಯ ಬೆಲೆಯಲ್ಲಿ ಗಣನೀಯವಾದ ಕುಸಿತವುಂಟಾಯಿತು. ಅಕ್ಕಿ ದಕ್ಷಿಣ ಕನ್ನಡ ಜಿಲ್ಲೆಯ ರೈತರಿಗೆ ಅತಿಮುಖ್ಯವಾದ ಆಹಾರ ಧಾನ್ಯ. ಅದೇ ಅವರ ಮುಖ್ಯ ಜೀವನೋಪಾಯವಾಗಿದ್ದದ್ದು. ಈ ಬೆಲೆ ಕುಸಿತಕ್ಕೆ ಕಾರಣ ಒಳನಾಡಿನಲ್ಲೂ ವಿದೇಶದಲ್ಲೂ ಅಕ್ಕಿಗೆ ಬೇಡಿಕೆ ಕಡಮೆಯಾದದ್ದು ಎಂಬುದಾಗಿ ಜಾನ್ ಸ್ಟೋಕ್ಸ್ ವರದಿ ಮಾಡಿದನು[೩೩]. ಮೆಣಸು, ಏಲಕ್ಕಿ, ತೆಂಗಿನಕಾಯಿ ಮೊದಲಾದ ವಸ್ತುಗಳ ಬೆಲೆಯೂ, ಮುಂಬಯಿಯಿಂದ ಬೇಡಿಕೆ ಕೊರತೆಯಾದುದರಿಂದಾಗಿ ಗಣನೀಯವಾಗಿ ಕುಸಿಯಿತು.

ಎ. ಸಾರದರಾಜು[೩೪] ಮತ್ತು ಪಿ.ಜೆ. ಥಾಮಸ್[೩೫] ಅವರ ಅಧ್ಯಯನಗಳು, ಹೇಗೆ ಹತ್ತೊಂಬತ್ತನೇ ಶತಮಾನದ ಮೊದಲರ್ಧದಲ್ಲಿ ಮದರಾಸು ಪ್ರೆಸಿಡೆನ್ಸಿಯಾದ್ಯಂತ ಆರ್ಥಿಕ ಕುಸಿತ ಕಂಡುಬಂದಿತು ಎಂಬುದನ್ನು ತೋರಿಸಿವೆ. ೧೮೨೦ರ ಕೊನೆ ಮತ್ತು ೧೮೩೦ರ ದಕ್ಷಿಣಕನ್ನಡ ಪ್ರದೇಶವು ಮದರಾಸು ಪ್ರೆಸಿಡೆನ್ಸಿಯ ಈ ಸಾಮಾನ್ಯ ಆರ್ಥಿಕ ಕುಸಿತಕ್ಕೆ ಹೊರಗಾಗಿರಲಿಲ್ಲ.[೩೬]

ಮಾರಾಟದ ಈ ಏರುಪೇರುಗಳ ಜೊತೆಗೆ, ಬ್ರಿಟಿಷ್ ಕಂದಾಯಾಡಳಿತ ವ್ಯವಸ್ಥೆಯಲ್ಲಿ ಅಂತರ್ಗತವಾದ ಕೆಲವು ದೋಷಗಳು ರೈತರ ಸಂಕಷ್ಟಗಳನ್ನು ಹೆಚ್ಚಿಸಿದುವು. ೧೮೩೧ರಲ್ಲಿ ಜಿಲ್ಲೆಯ ಕಲೆಕ್ಟರ್ ಎಚ್. ಡಿಕಿನ್‌ಸನ್ ಹೀಗೆ ವರದಿ ಮಾಡಿದನು: ''ಅವರಲ್ಲಿ (ರೈತರಲ್ಲಿ) ಅತ್ಯಂತ ಹತಾಶ ಸ್ಥಿತಿಯುಂಟಾಗಿದೆ. ಸಂಪೂರ್ಣವಾಗಿ ನಾಶವಾಗದಂತೆ ಅವರನ್ನು ಉಳಿಸಬೇಕಾದರೆ, ತೆರಿಗೆಯಲ್ಲಿ ಗಣನೀಯ ಪ್ರಮಾಣದ ಮೊತ್ತವನ್ನು ಖಾಯಂ ಆಗಿ ಬಿಟ್ಟುಕೊಡುವುದು ಅತ್ಯಗತ್ಯವಾಗಿದೆ ಎಂದು ಹೇಳಲು ನಾನು

ಹಿಂಜರಿಯುವುದಿಲ್ಲ.... ರೈತರ ಜಮೀನುಗಳ ನಿಜವಾದ ಪರಿಸ್ಥಿತಿ ಏನು ಎಂಬುದನ್ನು ಖಚಿತ ಪಡಿಸಿಕೊಂಡು ಅವರು ಪಡೆದುಕೊಳ್ಳಲು ಸಾಧ್ಯವಿರುವ ಪ್ರಮಾಣದ ಬೇರೀಜನ್ನು (ನಿರ್ದಿಷ್ಟ ಮೊತ್ತದ ತೆರಿಗೆ) ನಿರ್ಧರಿಸಲು ಒಡನೆಯೇ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ...''[೩೭]

ಅಲ್ಲದೆ ೧೮೩೦-೩೧ರಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬೆಳೆಗಳು ವಿಫಲವಾದುವು. ರೈತರ ಬಳಿ ಮಾರಾಟ ಮಾಡಿ, ಹಣ ಸಂಗ್ರಹಿಸಿ, ಸರಕಾರ ಬಾಕಿಯನ್ನು ತುಂಬಲು ಸಾಕಷ್ಟು ದಾಸ್ತಾನು ಯಾವಾಗಲೂ ಇರಲಿಲ್ಲ. ಎಚ್.ಡಿಕಿನ್‌ಸನ್‌ನನು ೧೮೩೦ ನವೆಂಬರಿನ ಹುಜೂರ್ ಜಮಾಬಂದಿಯಲ್ಲಿ ಒರಟಾಗಿ ಮತ್ತು ಅವಸರವಾಗಿ ಕಂದಾಯ ನಿಗದಿ ಮಾಡಿದ ರೀತಿಯು ಕೂಟುಗಳಿಗೆ ಇನ್ನೊಂದು ಕಾರಣವಾಯಿತು.[೩೮] ಕರಭಾರದಿಂದ ನಲುಗಿದ್ದ ರೈತರಿಗೆ ಹಾಸ್ಯಾಸ್ಪದ ಪ್ರಮಾಣದ, ಅದರಲ್ಲೂ ಏಕರೂಪತೆಯಿಲ್ಲದ ವಿನಾಯಿತಿಯನ್ನು ಅವನು ಪ್ರಕಟಿಸಿದನು. ಈ ಸಮಸ್ಯೆಗಳಿಗೆ ಉಪ್ಪು ಮತ್ತು ತಂಬಾಕುಗಳ ಸ್ವಾಮ್ಯದ ಸಮಸ್ಯೆ ಸೇರಿಕೊಂಡಿತು. ನ್ಯಾಯಾಲಯಗಳಿಗೆ ಹಾಜರಾಗುವ ವೆಚ್ಚ, ಛಾಪಾಕಾಗದ ಸಂಬಂಧವಾದ ನಿಯಮಗಳು, ಅಬ್ಕಾರಿ ಇವೆಲ್ಲ ಸೇರಿದುವು.[೩೯]

೧೮೩೦ರ ಕೊನೆಯ ತಿಂಗಳುಗಳಲ್ಲಿ ರೈತರ ಅಶಾಂತಿ ವ್ಯಕ್ತವಾಗತೊಡಗಿತು. ತಮಗಾದ ನಷ್ಟಗಳ ಬಗೆಗೆ ರೈತರು ವ್ಯಕ್ತಿಗತವಾಗಿ ಮತ್ತು ಒಟ್ಟಾಗಿ ಅಹವಾಲುಗಳನ್ನು ಅಥವಾ ಅರ್ಜಿಗಳನ್ನು ಕೊಟ್ಟರು. ಆದರೆ ಬಂಡಾಯವು ಸ್ಪಷ್ಟವಾದದ್ದು ೧೮೩೧ರ ಪ್ರಾರಂಭದ ತಿಂಗಳುಗಳಲ್ಲಿ.[೪೦] ಡಿಕಿನ್‌ಸನ್‌ನಿಗೂ ನ್ಯಾಯಾಲಯಕ್ಕೂ ಕೊಟ್ಟ ಅರ್ಜಿಗಳಲ್ಲಿ ಅವರು ತಮಗೊದಗಿರುವ ಕಷ್ಟನಷ್ಟಗಳನ್ನು ವಿವರಿಸಿ, ಅವಸರವಾಗಿ ಕಂದಾಯ ನಿಗದಿ ಮಾಡಿರುವುದೇ ಅದಕ್ಕೆ ಕಾರಣವಾಗಿದೆಯೆಂದು ಹೇಳಿ, ವಿನಾಯಿತಿಗಳಿಗೆ ಒತ್ತಾಯ ಪಡಿಸಿದರು. ಎರಡನೇ ಹಂತದಲ್ಲಿ ಅಂದರೆ; ೧೮೩೧ ಜನವರಿಯ ಪ್ರಾರಂಭದಲ್ಲಿ ರೈತರು ತಮ್ಮ ಕೂಟುಗಳನ್ನು ಪ್ರಾರಂಭಿಸಿದರು. ಈ ಸಭೆಗಳಲ್ಲಿ ಅವರು ತಮ್ಮ ಸಮಸ್ಯೆಗಳನ್ನು ಚರ್ಚಿಸಿದರು. ಅವುಗಳನ್ನು ಪರಿಹರಿಸಿಕೊಳ್ಳುವ ಮಾರ್ಗೋಪಾಯಗಳನ್ನೂ ಚಳವಳಿಯ ವ್ಯವಸ್ಥೆಗೆ ಸಂಬಂಧಿಸಿದ ಪ್ರಶ್ನೆಗಳನ್ನೂ ವಿಚಾರ ಮಾಡಿದರು. ಮೊದಲು ಕೂಟುಗಳ ಪ್ರಾರಂಭವಾದದ್ದು ದಕ್ಷಿಣ ಕನ್ನಡದ ದಕ್ಷಿಣ ಭಾಗದಲ್ಲಿ; ಬಹು ಬೇಗ ಅದು ಉತ್ತರದ ಭಾಗಗಳಿಗೆ, ಕುಂದಾಪುರದವರೆಗೂ ಇನ್ನೂ ಮುಂದಕ್ಕೂ ಹಬ್ಬಿತು. ಬಾರಕೂರು, ಬಂಟ್ವಾಳ, ಬ್ರಹ್ಮಾವರ, ಮಧೂರು, ಮಂಜೇಶ್ವರ, ಮುಲ್ಕಿ, ಕದ್ರಿ, ಕುಂಬ್ಳ, ಮೊಗ್ರಾಲ್,ಉಪ್ಪಿನಂಗಡಿ, ಮತ್ತು ವಿಟ್ಲ ಇವು ಆಯಾ ಪ್ರದೇಶದ ರೈತರು ಕೂಟುಗಳಾಗಿ ಸಭೆ ಸೇರುತ್ತಿದ್ದ ಕೆಲವು ಮುಖ್ಯ ಸ್ಥಳಗಳು.[೪೧] ಕದ್ರಿಯ ಮಂಜುನಾಥ ದೇವಾಲಯವು ಈ ಬಂಡಾಯಗಳ ಕೇಂದ್ರವಾಗಿತ್ತು. ಅಲ್ಲಿ ೧೮೩೧ ಜನವರಿಯ ಕೊನೆಗೆ ಒಂದು 'ಮಹಾಸಭೆ'ಯನ್ನು ಸೇರಿಸಲಾಯಿತು.[೪೨] ಹಾಗೆಯೇ ಬಸರೂರಿನ ವೆಂಕಟರಮಣ ದೇವಾಲಯ, ಮಂಗಳೂರಿನ ಮಹಾಮಾಯಿ ದೇವಾಲಯ, ಮಂಜೇಶ್ವರದ ದೇಪಾಲಯ, ಪಾಮಂಜೂರಿನ ಇನ್ನೊಂದು ದೇವಾಲಯ ಇವೆಲ್ಲ ಕೂಟುಗಳ ಮುಖ್ಯ ಕೇಂದ್ರಗಳಾಗಿದ್ದುವು.[೪೩] ಹೀಗೆ ದೇವಾಲಯಗಳನ್ನು ಕೂಟುಗಳಿಗಾಗಿ ಉಪಯೋಗಿಸುತ್ತಿದ್ದುದು, ಮಲಬಾರಿನ ಮೋಪ್ಲಾ ದಂಗೆಗಳಲ್ಲಿ ಮಸೀದಿಗಳು ಮತ್ತು ಮದ್ರಸಾಗಳು ವಹಿಸಿದ ಪಾತ್ರವನ್ನು ನೆನಪು ಮಾಡುತ್ತವೆ. ಅವುಗಳನ್ನು ಡಿ.ಎನ್. ಧನಗರೆ ಅವರು ವಿಶ್ಲೇಷಣೆ ಮಾಡಿದ್ದಾರೆ.[೪೪] ಪ್ರತಿಯೊಂದು ಕೂಟಿಗೂ ನಾಯಕರಿದ್ದರು. ಅವರೆಲ್ಲಾ ಕದ್ರಿಯಲ್ಲಿ ಮಹಾಕೂಟು ಸಭೆ ಸೇರುತ್ತಿದ್ದರು. ಕೂಟು ವ್ಯವಸ್ಥಾಪಕರು ಒಂದು 'ರಹಸ್ಯ ಮಂಡಲಿ'ಯನ್ನು ರೂಪಿಸಿಕೊಂಡಿದ್ದರು. ಈ ಮಂಡಳಿಯಲ್ಲಿ ಪ್ರತಿಯೊಂದು ಮಾಗಣೆಯ (ತಾಲೂಕಿನ ಉಪವಿಭಾಗ) ಇಬ್ಬರೋ ಮೂವರೋ ಮುಕ್ತೇಸರರು (ಮುಖ್ಯರಾದ ರೈತರು) ಇರುತ್ತಿದ್ದರು. ಅವರು ಆಂದೋಲನದ ಆಲೋಚನಾ ಭಾಗವಾಗಿದ್ದರು. ಅವರು ತಮ್ಮ ವಿಚಾರಗಳನ್ನೂ ಕಾರ್ಯಕ್ರಮಗಳನ್ನೂ ರೈತರಿಗೆ ಹರಡಲು ಬೇನಾಮಿಯಾಗಿ ಕರಪತ್ರಗಳನ್ನು ತಯಾರಿಸಿ ಹಂಚುತ್ತಿದ್ದರು.

ಕೆಲವೊಮ್ಮೆ ಈ ಕೂಟುಗಳಲ್ಲಿ ಭಾಗವಹಿಸಿದವರು ಸರಕಾರಿ ಅಧಿಕಾರಿಗಳ ಮೇಲೆ ಆಕ್ರಮಣ

ಮಾಡುವ ಧೈರ್ಯ ತೋರಿಸುತ್ತಿದ್ದರು. ಸರಕಾರಿ ಪ್ರಕಟಣೆಯೊಂದನ್ನು ಓದಿ ಹೇಳಲು ಕಳುಹಿಸಿದ ಒಬ್ಬ ಮಾಗಣೆ ಶಾನುಭೋಗನ ಹಾಗೂ, ಮುಲ್ಕಿಯ ಒಬ್ಬ ಅಮೀನನ ಮೇಲೆ ರೈತರು ಹಲ್ಲೆ ಮಾಡಿದರು.[೪೫] ರೈತರ ಈ ಪಟ್ಟು ೧೮೩೦ ನವೆಂಬರಿನಲ್ಲಿ ಪ್ರಾರಂಭವಾಗಿ ೧೮೩೧ ಮಾರ್ಚಿವರೆಗೂ ಮುಂದುವರಿಯಿತು. ಎನ್.ಎಸ್. ಕೆಮೆರಾನ್ (ಎಚ್.ಡಿಕಿನ್‌ಸನ್ನನ ನಂತರ ಕಲೆಕ್ಟರಾಗಿ ಬಂದವನು) ರೈತರಿಗೆ ಅವರ ಮನವಿಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿಯೂ ವಾಸ್ತವ ತಪಾಸಣೆ ಮಾಡಿದ ಮೇಲೆ ರೈತರ ಕಷ್ಟನಷ್ಟಗಳಿಗೆ ಪರಿಹಾರ ರೂಪವಾಗಿ ವಿನಾಯಿತಿಗಳನ್ನು ಪ್ರಕಟಿಸುವುದಾಗಿಯೂ ಭರವಸೆಕೊಟ್ಟ ಮೇಲೆ ರೈತರು ಚದರಿದರು, ಕೂಟುಗಳ ವ್ಯವಸ್ಥೆ ನಿಂತಿತು. ಹೀಗೆ ೧೮೩೧ರ ಏಪ್ರಿಲ್ ವೇಳೆಗೆ ಕೂಟು ದಂಗೆಗಳ ಮೊರೆತವು ತಣ್ಣಗಾಯಿತು.

ಈ ರೈತ ಬಂಡಾಯದ ನಾಯಕತ್ವದಲ್ಲಿ ಸಮಾಜದ ಎಲ್ಲಾ ವರ್ಗಗಳ ಪ್ರಾತಿನಿಧ್ಯವೂ ಇದ್ದಿತು. ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನದ ವಿವಕ್ಷೆ ಅಲ್ಲಿರಲಿಲ್ಲ. ಆದರೆ ಬಹುತೇಕ ನಾಯಕರು ಬ್ರಾಹ್ಮಣ ಮತ್ತು ಬಂಟ ಸಮುದಾಯಗಳಿಗೆ ಸೇರಿದ್ದರು. ಅವರೇ ಈ ಪ್ರದೇಶದ ಮುಖ್ಯ ಭೂ ಹಿಡುವಳಿದಾರರಾಗಿದ್ದವರು. ಅನೇಕ ಪ್ರಮುಖನಾಯಕರು ಸರಕಾರಿ ನೌಕರರು, ಜಮೀನ್ದಾರರೂ ಆಗಿದ್ದರು. ಉದಾಹರಣೆಗೆ ಸೂರಪ್ಪ ಬ್ರಹ್ಮಾವರದಲ್ಲಿ ಡಿಕಿನ್‌ಸನ್ನನ ಕಚೇರಿಯಲ್ಲಿ ಹೆಡ್‌ಮುನಶಿ ಆಗಿದ್ದನು.[೪೬] ಕೃಷ್ಣರಾವ್ ಮುಖ್ಯ ಶಿರಸ್ತೆದಾರನಾಗಿದ್ದನು, ಅವನ ತಮ್ಮ ರಂಗರಾವ್ ಮಂಗಳೂರು ತಾಲೂಕಿನ ಶಿರಸ್ತೆದಾರ, ವ್ಯಾಸರಾವ್ ಬೇಕಲ (ಕಾಸರಗೋಡು) ತಾಲೂಕಿನ ಶಿರಸ್ತೆದಾರ.[೪೭] ನಾರಣಪ್ಪನು ದಾಖಲೆಗಳ ಅಧಿಕಾರಿಯಾಗಿದ್ದನು.[೪೮] ಇವರು ದಂಗೆಯ ಪ್ರಮುಖ ನೇತಾರರಾಗಿದ್ದರು. ಹೀಗೆ ಕೂಟುಗಳಿಗೆ ಸಮರ್ಥವಾದ ಮೇಲುವರ್ಗದ ನಾಯಕತ್ವವಿದ್ದಿತು. ಅಲ್ಲದೆ ರೈತರು ವ್ಯಕ್ತಿಗತವಾಗಿಯೂ ಸಾಮೂಹಿಕವಾಗಿಯೂ ಮನವಿಗಳನ್ನು ಸಲ್ಲಿಸುತ್ತಿದ್ದುದು ಹೇಗೆ ರೈತವರ್ಗವು ಸಾಮೂಹಿಕವಾಗಿ ಪಾಲುಗೊಂಡಿತ್ತು ಎಂಬುದನ್ನು ಸೂಚಿಸುತ್ತವೆ.

ಈ ಗಲಭೆಗಳನ್ನು ದೇಶೀಯ ಜನರಲ್ಲಿ ಉಂಟಾದ ಧಾರ್ಮಿಕ ವೈಮನಸ್ಯದ ಮಾತುಗಳಲ್ಲಿ ವಿವರಿಸಲು ಜಾನ್ ಸ್ಟೋಕ್ಸ್ ಪ್ರಯತ್ನಿಸಿದನು. ಕಂಪೆನಿಯ ಸೇವೆಯಲ್ಲಿದ್ದ ಬ್ರಾಹ್ಮಣ ನೌಕರರು ಈ ಪ್ರದೇಶದ ಆಡಳಿತದಲ್ಲಿ ಕ್ರಿಶ್ಚಿಯನರು ತೊಡಗಿಕೊಳ್ಳುವುದನ್ನು ಸಹಿಸದೆ ಹೋದುದರ ಫಲವೇ ಈ ಕೂಟುಗಳು ಎಂದು ಅವನು ಮುಖ್ಯವಾಗಿ ಹೇಳಿದನು. ದೇಶೀಯ ಕ್ರಿಶ್ಚಿಯನ್ ಅಧಿಕಾರಿಗಳ ಬೆಂಬಲ ಪಡೆದಿದ್ದ ಸರಕಾರದ ಆಡಳಿತಕ್ಕೆ ಮಸಿ ಬಳಿಯಲು, ಕೆಟ್ಟ ಹೆಸರು ತರಲು ಬ್ರಾಹ್ಮಣರು ಬಯಸಿದರು ಎಂದು ಅವನು ಹೇಳಿದನು.[೪೯] ಸ್ಟೋಕ್ಸನಿಗೆ, ಬ್ರಾಹ್ಮಣರ ಮುಖ್ಯ ಗುರಿಯು ಕ್ರಿಶ್ಚಿಯನ್ ನೌಕರರನ್ನು ತೆಗೆದುಹಾಕಿ, ಸರಕಾರಿ ಕಚೇರಿಗಳಲ್ಲಿ ಬ್ರಾಹ್ಮಣರ ಪ್ರಾಬಲ್ಯವನ್ನು ಉಳಿಸುವುದು.[೫೦] ಕೂಟಗಳ ಮುಖ್ಯ ಪ್ರೇರಕರು ಕೃಷ್ಣರಾವ್, ರಂಗರಾವ್, ವ್ಯಾಸರಾವ್ ಮತ್ತು ದೇರೆಬೈಲು ರಾಮಯ್ಯ.[೫೧] ದೇಶೀಯ ಕ್ರಿಶ್ಚಿಯನ್ ಅಧಿಕಾರಿಗಳಾದ ಮನೋಅಲ್ ಕೋಲ್ಹೊ (ನಾಯಿಬ್ ಶಿರಸ್ತೆದಾರ್) ಅವನ ಸೋದರ ಐ. ಎಸ್. ಪ್ರಭು (ಖಜಾಂಚಿ) ಅವರ ಬಂಧು ಬೋನಿಫೇಸ್ ಫರ್ನಾಂಡಿಸ್ (ಪೋಲೀಸ್ ಮುನಶಿ) ನಿಕೋಲೊ ಪ್ರಭು ಎಂಬ ಇನ್ನೊಬ್ಬ ಮುನಶಿ ಇವರುಗಳ ವಿರುದ್ಧವಾಗಿ ದೂರು ಕೊಟ್ಟದ್ದಕ್ಕೂ ಅವರೇ ಕಾರಣರು ಎಂದು ಸ್ಟೋಕ್ಸ್ ವಾದಿಸಿದನು.[೫೨]

ಬ್ರಿಟಿಷ್ ಚಕ್ರಾಧಿಪತ್ಯದ ಇತಿಹಾಸ ರಚನಾ ಪ್ರಜ್ಞೆಗೆ ಜಾನ್ ಸ್ಟೋಕ್ಸನ ವಾದವು ಒಳ್ಳೆಯ ಮಾದರಿಯಾಗಿದೆ. ಡಿಕಿನ್‌ಸನ್ನನ ಆಡಳಿತದಲ್ಲಿ ರೈತರಲ್ಲಿ ಸಾರ್ವತ್ರಿಕವಾದ ಅತೃಪ್ತಿ ಅಶಾಂತಿ ಉಂಟಾಗಿದ್ದಿತು ಎಂಬ ವಾಸ್ತವಾಂಶವನ್ನು ಅವನು ಚಾಪೆಯಡಿಗೆ ತೂರಿದನು. ಜಾನ್ ಸ್ಟೋಕ್ಸನ ಹಾಗೂ ಅವನ ಪೂರ್ವಗಾಮಿಗಳ ನೀತಿಗಳನ್ನು ಅನಗತ್ಯ ಮತ್ತು ಅನುದಾರ ಎಂದು ಕೆಮೆರಾನ್ ಟೀಕಿಸಿದನು. ೧೮೩೦ರ ಜಮಾಬಂದಿಯನ್ನು ಬಹಳ ಅವಸರದಲ್ಲಿ ಮಾಡಬೇಕಾಯಿತು ಎಂಬುದನ್ನೂ, ಅಲ್ಲಿ ತೋರಿಸಿದ ರಿಯಾಯಿತಿಗಳು ತೀರಾ ಅಲ್ಪ, ಗಣನೆಗೇ ಬಾರದಷ್ಟು ಆಗಿದ್ದುವು ಎಂಬುದನ್ನೂ ಸ್ಟೋಕ್ಸನೇ ಒಪ್ಪಿಕೊಂಡಿದ್ದನು.[೫೩] ಅಲ್ಲದೆ ಕೂಟುಗಳ

ನಾಯಕರು ಕೇವಲ ಬ್ರಾಹ್ಮಣರಾಗಿರಲಿಲ್ಲ. ಅವನೇ ಒಪ್ಪಿಕೊಂಡ ಇನ್ನೊಂದು ಅಂಶವೂ ಇತ್ತು. ಕಂಪೆನಿಯ ಸೇವೆಯಲ್ಲಿದ್ದ ಮುಸ್ಲಿಂ ಮತ್ತು ಹಿಂದೂ ನೌಕರರ ಸಂಖ್ಯೆಗೆ ಹೋಲಿಸಿದರೆ, ದೇಶೀಯ ಕ್ರಿಶ್ಚಿಯನರ ಸಂಖ್ಯೆ ತುಂಬಾ ಕಡಮೆ.[೫೪] ವಾಸ್ತವವಾಗಿ ಬ್ರಾಹ್ಮಣರು ಉನ್ನತ ಸರಕಾರಿ ಹುದ್ದೆಗಳಲ್ಲಿದ್ದು ದೇಶೀಯ ಕ್ರಿಶ್ಚಿಯನರಿಗಿಂತಲೂ ಹೆಚ್ಚಿನ ಪ್ರಾತಿನಿಧ್ಯವು ಅವರಿಗೆ ದೊರಕಿದ್ದಿತು. ಬ್ರಾಹ್ಮಣ ಮುಖಂಡರು ಕೂಟುಗಳನ್ನು ವ್ಯವಸ್ಥೆ ಮಾಡುತ್ತಿದ್ದುದಕ್ಕೆ ಮುಖ್ಯ ಕಾರಣ ಅವರೂ ಕಂಪೆನಿಯ ಕಂದಾಯಾಡಳಿತದಿಂದ ಹಾನಿಗೊಳಗಾಗಿದ್ದುದು. ಆದ್ದರಿಂದ ಸ್ಟೋಕ್ಸನ ವಾದದಲ್ಲಿ ಹುರುಳಿಲ್ಲ.

ಆದರೆ ಜಾನ್ ಸ್ಟೋಕ್ಸನ ನಿಲುವನ್ನು ಅರ್ಥ ಮಾಡಿಕೊಳ್ಳಬಹುದು. ಕೂಟುಗಳ ವ್ಯವಸ್ಥಾಪಕರು ಕಂಪೆನಿಯ ದೇಶೀಯ ಕ್ರಿಶ್ಚಿಯನ್ ನೌಕರರ ವಿರುದ್ಧವಾಗಿ ಈ ಕೆಳಗಿನ ಆರೋಪಗಳನ್ನು ಹೊರಿಸಿ ದೂರು ಸಿಲ್ಲಿಸಿದ್ದರು: ೧. ಅವರು ತಮ್ಮ ಮನವಿಗಳನ್ನು ಕಲೆಕ್ಟರನಿಗೆ ಸರಿಯಾದ ರೀತಿಯಲ್ಲಿ ಭಾಷಾಂತರಿಸಿ ಹೇಳುತ್ತಿಲ್ಲ; ಮತ್ತು ೨. ಅವರು ಲಂಚ ತೆಗೆದುಕೊಳ್ಳುತ್ತಿದ್ದಾರೆ. ಇವುಗಳ ಪೈಕಿ ಮೊದಲನೆಯ ಆಪಾದನೆಯು ಎಷ್ಟು ಮಟ್ಟಿಗೆ ನಿಲ್ಲುವಂಥದಾಗಿತ್ತೋ ತಿಳಿಯುವುದಿಲ್ಲ. ಕೊನೆಯಪಕ್ಷ ಒಬ್ಬನು ಮೊನೊಯೆಲ್ ಪ್ರಭು ಎನ್ನುವವನು ರೈತರಿಂದ ಲಂಚವನ್ನು ಸ್ವೀಕರಿಸಿದ್ದಕ್ಕೆ ಆಧಾರವಿತ್ತು.[೫೫] ಅವಿಧೇಯ ವಿಧಾನಗಳನ್ನು ತೊರೆಯ ಬೇಕೆಂದು ರೈತರನ್ನು ಒಲಿಸುತ್ತಾ ಅವನು ಸರಕಾರಕ್ಕೆ ಸಹಾಯ ಮಾಡುತ್ತಿದ್ದನು.[೫೬] ನಿಷ್ಠರಾದ ನೌಕರರ ಇಂತಹ ವಿರಳ ಸಂದರ್ಭಗಳಲ್ಲಿ ಅವರು ಆಕಸ್ಮಿಕವಾಗಿ ಕ್ರಿಶ್ಚಿಯನ್ನರು ಆಗಿದ್ದುದರಿಂದ ಸ್ಟೋಕ್ಸನು ದಕ್ಷಿಣ ಕನ್ನಡದ ಇಡೀ ಕ್ರೈಸ್ತ ಸಮುದಾಯವನ್ನು ಕುರಿತು ಸುಧಾರಣೀಕರಿಸಿ ಹೇಳಲು ಅವಕಾಶವಾಯಿತೆಂದು ತೋರುತ್ತದೆ. ''ದಕ್ಷಿಣ ಕನ್ನಡದ ದೇಶೀಯ ಕ್ರಿಶ್ಚಿಯನ್ನರು ಹಿಂದೂಗಳಿಗೂ ಅವರ ಯೂರೋಪಿಯನ್ ಮೇಲಧಿಕಾರಿಗಳಿಗೂ ನಡುವೆ ಅಮೂಲ್ಯವಾದ ಸಂಪರ್ಕದ ಕೊಂಡಿಯಾಗಿದ್ದಾರೆ. ಭಾಷೆಯಲ್ಲಿ ಮತ್ತು ಸ್ಥಳೀಯ ಮಾಹಿತಿಯಲ್ಲಿ ಅವರು ಮೊದಲಿನವರೊಂದಿಗೆ, ಧರ್ಮದಲ್ಲಿ ಮತ್ತು ಶಿಕ್ಷಣದಲ್ಲಿ ಎರಡನೆಯವರೊಂದಿಗೆ ಅವರು ಸೇರುತ್ತಾರೆ.''[೫೭] ದಕ್ಷಿಣ ಕನ್ನಡದ ಕಂಪೆನಿ ಆಡಳಿತದಲ್ಲಿ ಇಡೀ ಕ್ರಿಶ್ಚಿಯನ್ ಸಮುದಾಯವೇ ಅವರೊಂದಿಗೆ ಸೇರಿಕೊಂಡಿತ್ತು ಎಂದೇನೂ ಭಾವಿಸಬೇಕಾಗಿಲ್ಲ. ಹಿಂದಿನಿಂದಲೂ ಪ್ರಮುಖ ಸಮುದಾಯಗಳಾದ ಬ್ರಾಹ್ಮಣರು, ಬಂಟರು ಮತ್ತು ಮುಸ್ಲಿಮರು ಅವರನ್ನು ಕುರಿತು ಅಸೂಯೆ ಪಡಲು ಕಾರಣಗಳಿರಲಿಲ್ಲ[೫೮]. 'ಒಡೆದು ಆಳುವ' ನೀತಿಯ ಅಂಗವಾಗಿ ಒಂದು ಮತವನ್ನು ಇನ್ನೊಂದರ ಮೇಲೆ ಎತ್ತಿಕಟ್ಟಿ ಆಟವಾಡುವ ಇತಿಹಾಸಲೇಖನದ ಸ್ವರೂಪಕ್ಕೆ ಇದು ಮಾದರಿಯಾಗಿದೆ, ಭಾರತದಲ್ಲಿ ಬ್ರಿಟಿಷ್ ಆಳಿಕೆಯಲ್ಲಿದ್ದ ಎಲ್ಲಾ ಪ್ರದೇಶಗಳಲ್ಲೂ ಇದಕ್ಕೆ ನಿದರ್ಶನಗಳು ಹೇರಳವಾಗಿ ದೊರಕುತ್ತದೆ.[೫೯]

ಕೆಮೆರಾನ್ ಕಲೆಕ್ಟರನಾಗಿ ಅಧಿಕಾರ ವಹಿಸಿಕೊಂಡೊಡನೆಯೇ ಕ್ರಿಶ್ಚಿಯನ್ ನೌಕರರ ವಿರುದ್ಧವಾಗಿದ್ದ ದೂರುಗಳನ್ನು ವಿಚಾರಣೆಗೊಳಪಡಿಸಿ ಅವರನ್ನು ಅಕ್ರಮ ವ್ಯವಹಾರಗಳಿಗಾಗಿ ದಂಡಿಸಿದನು. ಉದಾಹರಣೆಗೆ ಮೊನೊಯೆಲ್ ಪ್ರಭುವಿನ ಮೇಲೆ ಲಂಚಗುಳಿತನದ ಆರೋಪವಿತ್ತು. ಅವನ ವಿರುದ್ಧವಾಗಿ ಕೆಮೆರಾನ್ ಆಜ್ಞೆ ಹೊರಡಿಸಿದಾಗ ಅವನು ೧೮೩೧ರ ಮಾರ್ಚಿಯಲ್ಲಿ ಕೆಲಸಕ್ಕೆ ರಾಜೀನಾಮೆ ಕೊಟ್ಟನು.[೬೦] ಐ ಎಸ್ ಕೊಯೆಲೊನನ್ನು ಕೆಲಸದಿಂದ ವಜಾಮಾಡಲಾಯಿತು. ೧೮೩೦ರ ಜನವರಿಯಲ್ಲಿ ಮಂಗಳೂರಿನಿಂದ ಪ್ರೆಸಿಡೆನ್ಸಿಯ ಖಜಾನೆಗೆ ಕಳುಹಿಸಿದ ಹಣದಲ್ಲಿ ಕೊರತೆ ಕಂಡುಬಂದುದಕ್ಕೆ ಅವನು ಹೊಣೆಗಾರನೆಂದು ತೀರ್ಮಾನಿಸಲಾಯಿತು.[೬೧]

ಕೂಟುಗಳ ನಾಯಕರನ್ನು ಸರಕಾರವು ಶಿಕ್ಷೆಗೊಳಪಡಿಸಿತು. ದಕ್ಷಿಣ ಕನ್ನಡವು ತಮ್ಮ ಆಡಳಿತದ ವಿರುದ್ಧವಾಗಿ ಹೀಗೆ ಪದೇ ಪದೇ ಬಂಡಾಯಕ್ಕೆ ಒಳಪಡುತ್ತಿದ್ದುದರಿಂದ ಈ ಸಂದರ್ಭವನ್ನು ದೇಶೀಯರಿಗೆ ಸರಿಯಾದ ಎಚ್ಚರಿಕೆ ಕೊಡುವಂತೆ ಮಾಡಬೇಕೆಂದು ಬಯಸಿದನು.[೬೨] ಇದರ ಫಲ ಅನ್ಯಾಯವಾಗಿ ಸರಕಾರಿ ಅಧಿಕಾರಿಗಳನ್ನು ಸೇವೆಯಿಂದ ವಜಾ ಮಾಡಿದುದು. ಸ್ಟೋಕ್ಸನು ಕೃಷ್ಣರಾಯನನ್ನು ವಿಚಾರಣೆ ಮಾಡಿ ೧೮೩೧ರ ಡಿಸೆಂಬರ್ ೮ ರಂದು ಅವನನ್ನು ಕೆಲಸದಿಂದ ವಜಾ ಮಾಡಿದನು.[೬೩] ಕೆಲವು ಬಾಕೀದಾರರ ಆಸ್ತಿಪಾಸ್ತಿಗಳನ್ನು

ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಮಂಗಳೂರಿನ ತಹಸೀಲ್ದಾರನಿಗೆ ಡಿಕಿನ್‌ಸನ್ ಆಜ್ಞೆ ಮಾಡಿದನು.[೬೪] ಮಂಗಳೂರಿನಲ್ಲಿ ಕೇಂದ್ರವ್ಯಕ್ತಿಗಳೆನಿಸಿದ್ದ ೧೬ ಜನರನ್ನು ಬಂಧಿಸಲು ಡಿಕಿನ್‌ಸನ್ ವಾರಂಟ್‌ಗಳನ್ನೂ ಹೊರಡಿಸಿದನು.[೬೫] ಅಲ್ಲದೆ ಅನೇಕ ಮುಖ್ಯ ಅಧಿಕಾರಿಗಳನ್ನು ಕೆಲಸದಿಂದ ವಜಾ ಮಾಡಲಾಯಿತು.[೬೬] ದಂಗೆಕಾರ ರೈತರು, ಇನ್ನೊಂದು ಜಮಾಬಂದಿಯನ್ನು ನಿಗದಿಪಡಿಸುವವರೆಗೂ ಮತ್ತೆ ದಂಗೆಯೇಳುವುದಿಲ್ಲ ಎಂದು ಒಪ್ಪಿ ಒಂದು ಮುಚ್ಚಳಿಕೆಗೆ ಸಹಿ ಮಾಡಬೇಕಾಯಿತು.[೬೭] ಕೃಷ್ಣರಾವ್ ಮತ್ತು ಅವನ ಗೆಳೆಯರ ಚಟುವಟಿಕೆಗಳನ್ನು ಕುರಿತು ೧೮೩೪-೩೫ರಲ್ಲಿ ಕೆನರಾದ ಕಲೆಕ್ಟರನಾಗಿದ್ದ ಸಿ.ಆರ್. ಕಾಟನ್ ಕೊಟ್ಟ ಸಮಗ್ರವಾದ ವರದಿಯ ಆಧಾರದಿಂದ, ೧೮೩೯ರಲ್ಲಿ, ಸರಕಾರವು ಸ್ಟೋಕ್ಸ್ ನೀಡಿದ ತೀರ್ಪುಗಳನ್ನು ರದ್ದುಪಡಿಸಿತು. ವಜಾ ಆಗಿದ್ದ ನೌಕರರು ಕೂಟುಗಳನ್ನು ಪ್ರೇರಿಸಿದ ಅಪರಾಧಿಗಳಾಗಿರಲಿಲ್ಲ, ಅವರು ಸಾರ್ವಜನಿಕ ಉದ್ಯೋಗಕ್ಕೆ ಅರ್ಹರು ಎಂದು ಪ್ರಕಟಿಸಿತು.[೬೮]

ಈ ರೈತ ಬಂಡಾಯದ ಅನಂತರವೂ ವಸಾಹತುಶಾಹಿ ಸರಕಾರವು, ರೈತರಿಗೆ ಅವರ ಆರ್ಥಿಕ ಸಂಕಷ್ಟದ ಸಮಯದಲ್ಲಿ ನಿಜವಾಗಿಯೂ ಸಹಾಯಕವಾಗಬಹುದಾದ ಯಾವುದೇ ಪರಿಹಾರ ಕ್ರಮವನ್ನು ಕೈಗೊಳ್ಳಲಿಲ್ಲ. ತಾತ್ಕಾಲಿಕ ಕ್ರಮವಾಗಿ ಜಾನ್ ಸ್ಟೋಕ್ಸ್, ತೆರಿಗೆ ಕಟ್ಟಲು ಯಾರಿಗೆ ಸ್ವಲ್ಪವೂ ಸಾಧ್ಯವಿರಲಿಲ್ಲವೋ ಅವರಿಗೆ ವಿನಾಯಿತಿಯನ್ನು ಶಿಫಾರಸು ಮಾಡಿದನು. ೧೮೩೧ರ ಏಪ್ರಿಲಿನಲ್ಲಿ ಕಲೆಕ್ಟರನ ಅಧಿಕಾರಗಳನ್ನು ಹೆಚ್ಚಿಸಬೇಕೆಂದು ಕೆಮೆರಾನ್ ಸೂಚಿಸಿದನು. ಕೂಟುಗಳನ್ನು ಶಾಸನ ಬಾಹಿರವೆಂದು ಸಾರುವಂತೆ ಹೇಳಿದನು. ೧೮೩೧ರ ಏಪ್ರಿಲಿನಲ್ಲಿ ಕೆನರಾದ ಸಹಾಯಕ ನ್ಯಾಯಾಧೀಶ ಥಾಮಸ್ ಬಾಯಿಲ್ಯೂ ಹೀಗೆ ಅಭಿಪ್ರಾಯಪಟ್ಟನು: ಈ ಕ್ಷೋಭೆಗಳನ್ನು ತಡೆಯಲು ಇರುವ ಖಚಿತವಾದ ಫಲಕೊಡುವ ಏಕೈಕ ಮಾರ್ಗವು, ಇತರರ ಸಂಕಷ್ಟ ಸ್ಥಿತಿಯನ್ನು ಉಪಯೋಗಿಸಿಕೊಂಡು ತಮಗೆ ತೆರಿಗೆ ವಿನಾಯಿತಿಗಳ ಲಾಭ ಮಾಡಿಕೊಳ್ಳುವ ಕೆಲವರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಾ ಹೋಗುವುದು.[೭೦]

೧೮೩೦-೩೧ರ ಈ ಪ್ರತಿಭಟನೆಗಳು ಕಂಪೆನಿಯ ಕಂದಾಯಾಡಳಿತದ ವಿರುದ್ಧವಾಗಿದ್ದುವು. ಅವುಗಳಿಗೆ ಮುಖ್ಯವಾದ ಕಾರಣ ಸರಕಾರವು ವಿಧಿಸಿದ್ದ ಅಧಿಕ ಕರಭಾರ. ಆದ್ದರಿಂದ ಈ ದಂಗೆಗಳನ್ನು ಮುಖ್ಯವಾಗಿ 'ತೆರಿಗೆ ಬಂಡಾಯಗಳು' ಎಂದು ಪರಿಗಣಿಸಬಹುದು. ರೈತರು ಗಮನಾರ್ಹವಾಗಿ ಸಂಘಟನಾ ಸಾಮರ್ಥ್ಯವನ್ನು ತೋರಿಸಿ, ವಸಾಹತು ಸರಕಾರವನ್ನು ವಿರೋಧಿಸಿದರು. ನಾಯಕತ್ವವು ಸಮಾಜದ ಮೇಲುವರ್ಗಗಳಿಂದ ಬಂದಿತು. ಅದರಲ್ಲೂ ಆಡಳಿತಶಾಹಿಯ ಭಾಗವೇ ಆಗಿದ್ದರಿಂದ. ಹಾಗಾಗಿ ಇಡೀ ಸಮಸ್ಯೆ ಪ್ರಚೋದನೆಗೊಂಡದ್ದು ಆಡಳಿತದ ಪಾರಸ್ಪರಿಕ ಈರ್ಷ್ಯೆ ಮಾತ್ಸರ್ಯಗಳಿಂದ, ಅಥವಾ ಹೆಚ್ಚೆಂದರೆ ಧಾರ್ಮಿಕ ವೈಮನಸ್ಯಗಳಿಂದ ಎಂದು ಬ್ರಿಟಿಷರು ಭಾವಿಸುವಂತಾಯಿತು, ಅನೇಕ ಸಾರಿ. ಬ್ರಿಟಿಷರು ಸಹಜವಾಗಿಯೇ ತಮ್ಮ ಆಡಳಿತವನ್ನು ಸಂರಕ್ಷಿಸಿಕೊಳ್ಳಲು ಕಾತರರಾಗಿದ್ದರು. ಈ ಬಂಡಾಯಗಳು ಯಶಸ್ವಿಯಾಗದೆ ಹೋದರೂ ಕಂಪೆನಿ ಸರಕಾರದ ಕಂದಯಾಡಳಿತದ ದೋಷಗಳನ್ನು ವಸಾಹತುಶಾಹಿ ಆಡಳಿತದಲ್ಲಿ ಈ ಪ್ರದೇಶದ ರೈತರ ಕಷ್ಟಕರ ಪರಿಸ್ಥಿತಿಯನ್ನೂ ಎತ್ತಿ ತೋರಿಸಿದುವು.

## ಟಿಪ್ಪಣಿಗಳು

೧ ಕರ್ನಾಟಕದ ಇಂದಿನ ದಕ್ಷಿಣಕನ್ನಡ ಜಿಲ್ಲೆಯು, ನಮ್ಮ ಅಧ್ಯಯನಾವಧಿಯಲ್ಲಿ ಮದರಾಸ್ ಪ್ರೆಸಿಡೆನ್ಸಿಗೆ ಸೇರಿದ ಕೆನರಾ ಮತ್ತು ಸೂಂದಾ ಪ್ರಾಂತದ ಒಂದು ಭಾಗವಾಗಿತ್ತು. ಈ ಪ್ರಾಂತವನ್ನು ಬ್ರಿಟಿಷರು ೧೭೯೯ರಲ್ಲಿ ಅಂದರೆ, ಟೀಪುಸುಲ್ತಾನನ ಪತನವಾದೊಡನೆ ವಶಪಡಿಸಿಕೊಂಡರು. ಆಮೇಲೆ ಅದನ್ನು ದಕ್ಷಿಣ ವಿಭಾಗ ಮತ್ತು

ಉಪವಿಭಾಗ ಎಂದು ಎರಡಾಗಿ ಒಡೆಯಲಾಯಿತು (೧೮೦೧-೦೫). ಮೊದಲಿನದರಲ್ಲಿ ಬಾರಕೂರು, ಬೇಕಲ (ಕಾಸರಗೊಡು), ಬಂಟ್ವಾಳ ಮತ್ತು ಮಂಗಳೂರು ತಾಲೂಕುಗಳಿದ್ದುವು. ಅಮಿನ್‌ದಿವಿ ದ್ವೀಪಸಮೂಹವು ಮಂಗಳೂರು ತಾಲೂಕಿನ ಭಾಗವಾಗಿತ್ತು. 'ದಕ್ಷಿಣ ಕನ್ನಡ' ಎಂಬ ಉಕ್ತಿಯು ಇಲ್ಲಿ ಕೆನರಾ ಮತ್ತು ಸೂಂದಾ ಪ್ರಾಂತದ ದಕ್ಷಿಣ ವಿಭಾಗವನ್ನು ಸೂಚಿಸುತ್ತದೆ. ವಿವರಗಳಿಗೆ ನೋಡಿ: ಪ್ರೊಸೀಡಿಂಗ್ಸ್ ಆಫ್ ದಿ ಬೋರ್ಡ್ ಆಫ್ ರೆವಿನ್ಯೂ (ಪಿ. ಎಂ.ಬಿ.ಆರ್.), ೧೧-೧೨-೧೮೦೦, ಸಂ. ೨೬೮, ಪು. ೩೬೬; ಪಿ.ಎಂ.ಬಿ.ಆರ್. ೨೭-೧೨-೧೮೦೦, ಸಂ. ೨೬೯, ಪು. ೧೦,೬೮೧; ಪಿ.ಎಂ.ಬಿ.ಆರ್. ೩೦.೪.೧೮೦೧, ಸಂ. ೨೮೧, ಪು. ೫,೧೨೪; ಎಚ್. ಎ. ಸ್ಟುಯರ್ಟ್, ಮದರಾಸ್ ಡಿಸ್ಟ್ರಿಕ್ಸ್ ಮ್ಯಾನ್ಯುಯಲ್ಸ್, ಸೌತ್ ಕೆನರಾ, ಸಂ. ೨, ಮದರಾಸು ೧೮೯೫, ಪು. ೨೩೬-೩೭

೨ ಕೆಥಲೀನ್ ಗೋ: 'ಇಂಡಿಯನ್ ಪೆಸೆಂಟ್ ಆಪ್‌ರೈಸಿಂಗ್ಸ್,' ಎ.ಆರ್. ದೇಸಾಯಿ(ಸಂ), ಪೆಸೆಂಟ್ ಸ್ಟ್ರಗಲ್ಸ್ ಇನ್ ಇಂಡಿಯಾ, ನವದೆಹಲಿ, ೧೯೮೫, ಪು. ೯೪. ಇವರ ಪ್ರಕಾರ ಸ್ಥೂಲ ವಿಭಜನೆಯಿಂದ ಗುರಿ, ಆದರ್ಶ ಮತ್ತು ವ್ಯವಸ್ಥಾವಿಧಾನಗಳ ಆಧಾರದ ಮೇಲೆ ಐದು ಬಗೆಗಳು ಗೋಚರಿಸಿವೆ. ಅವು ೧) ದೇಶೀಯ ಅಥವಾ ಪುನರುಜ್ಜೀವನ ಚಳವಳಿಗಳು; ೨) ಧಾರ್ಮಿಕ ಚಳವಳಿಗಳು; ೩) ಸಾಮಾಜಿಕ ದರೋಡೆಗಳು (ಬಿಜೆ ಹಾಬ್ಸ್‌ಬಾಮನ ಮಾತುಗಳಲ್ಲಿ); ೪) ಉಗ್ರಗಾಮಿಗಳ ಸೇಡುತೀರಿಕೆ; ೫) ಸಾಮೂಹಿಕ ಬಂಡಾಯ. ಇವುಗಳ ಜೊತೆಗೆ ಡಿ.ಎನ್. ಧನಗರೆ ಇನ್ನೊಂದು ಬಗೆಯ ಪ್ರತಿಕ್ರಿಯೆಯನ್ನು ಗುರುತಿಸಿದರು. ಉದಾರವಾದಿ ಸುಧಾರಕ ಚಳವಳಿ ಎಂದು ಅದನ್ನು ಕರೆದರು. ವಿವರಗಳಿಗೆ ನೋಡಿ: ಡಿ.ಎನ್.ಧನಗೆರೆ, ಪೆಸೆಂಟ್ ಮೂವ್‌ಮೆಂಟ್ಸ್ ಇನ್ ಇಂಡಿಯಾ ೧೯೨೦-೧೯೫೦, ನವದೆಹಲಿ, ೧೯೮೩, ಪು. ೨೧೩-೧೪. ಸಾಮಾಜಿಕ ದರೋಡೆಗಾರಿಕೆಗೆ ನೋಡಿ: ಬಿ.ಜೆ. ಹಾಬ್ಸ್‌ಬಾಮ್, ದಿ ಬ್ಯಾಂಡಿಟ್ಸ್, ಲಂಡನ್, ೧೯೬೯, ಮತ್ತು ಪ್ರಿಮಿಟಿವ್ ರೆಬೆಲ್ಸ್, ಮ್ಯಾಂಚೆಸ್ಟರ್ ೧೯೫೯

೩ ಮದರಾಸ್ ಬೋರ್ಡ್ ಆಫ್ ರೆವಿನ್ಯೂ (ಬಿ.ಓ.ಆರ್)ಗೆ ಮುನ್ರೋ ಬರೆದ ಪತ್ರ, ೨೮.೮.೧೮೦೦, ಪಿ.ಎಂ.ಬಿ.ಆರ್, ೨೮.೮.೧೮೦೦ ಸಂ. ೨೬೧, ಪು. ೭೪೫೬; ಪಿ.ಎಂ.ಬಿ.ಆರ್, ೧೫.೯.೧೮೩೧, ಸಂ. ೧೩೦೦, ಪು. ೯೬೩೮; ಜಾನ್ ಸ್ಟರಾಕ್, ಮದರಾಸ್ ಡಿಸ್ಟ್ರಿಕ್ಸ್ ಮ್ಯಾನ್ಯುಯಲ್ಸ್, ಸೌತ್ ಕೆನರಾ, ಸಂ. ೧ ಮದರಾಸು ೧೮೯೪, ಪು. ೯೯; ಸರ್ ಅಲೆಗ್ಸಾಂಡರ್ ಜೆ ಅರ್ಬುತ್‌ನಾಟ್ (ಸಂ), ಸರ್ ಥಾಮಸ್ ಮುನ್ರೋ, ೨ ಸಂಪುಟಗಳು. ಮದರಾಸು, ೧೮೮೬, ಪು. ೫೪-೫೫, ೬೧; ದಿಪೋರ್ಟ್ ಆನ್ ದಿ ಲ್ಯಾಂಡ್ ಅಸೆಸ್‌ಮೆಂಟ್ ಎಂಡ್ ದಿ ಲ್ಯಾಂಡೆಡ್ ಟೆನ್ಯೂರ್ಸ್ ಆಫ್ ಕೆನರಾ, ಮಂಗಳೂರು, ೧೮೫೩, ಪು.೬

೪ ಎರಿಕ್‌ಸ್ಟೋಕ್ಸ್, ಉದ್ಧೃತ: ಸಿ.ಎ. ಬೇಲೀ (ಸಂ), ದಿ ಪೆಸೆಂಟ್ ಆರ್ಮ್ಡ್: ದಿ ಇಂಡಿಯನ್ ರಿವೊಲ್ಟ್ ಆಫ್ ೧೮೫೭, ಆಕ್ಸ್‌ಫರ್ಡ್, ೧೯೮೬, ಪು. ೨೧೮

೫ ಇರ್ಫಾನ್ ಹಬೀಬ್: ''ದಿ ಪೆಸೆಂಟ್ ಎನ್ ಇಂಡಿಯನ್ ಹಿಸ್ಟರಿ'', ಅಧ್ಯಕ್ಷ ಭಾಷಣ, ದಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ೪೩ನೇ ಅಧಿವೇಶನ, ಕುರುಕ್ಷೇತ್ರ, ೧೯೮೨, ಪು. ೪೨; ಕೆ.ಕೆ.ಎನ್. ಕುರುಪ್, ''ಅಗ್ರೇರಿಯನ್ ರಿಫಾರ್ಮ್ಸ್ ಎಂಡ್ ಸೋಷಿಯಲ್ ಚೇಂಜ್ ಇನ್ ಸೌತ್ ಇಂಡಿಯಾ: ಎನ್ ಅನಾಲಿಸಿಸ್ ಆಫ್ ಮೇಜರ್ ಟ್ರೆಂಡ್ಸ್ ಸಿನ್ಸ್ ಇಂಡಿಪೆಂಡೆನ್ಸ್'', ಇಂಡಿಯಾ ಪಾಸ್ಟ್ ಎಂಡ್ ಪ್ರೆಸೆಂಟ್, ಸಂ. ೩-೧, ೧೯೮೬, ಪು. ೧೭

೬ ಸುನೀಲ್ ಸೆನ್: 'ದಿ ರೈಸ್ ಆಫ್ ದಿ ಪೆಸೆಂಟ್'' ಅಧ್ಯಕ್ಷೀಯ ಭಾಷಣ, ಮಾಡರ್ನ್ ಇಂಡಿಯನ್ ಹಿಸ್ಟರಿ, ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ೪೬ ನೇ ಅಧಿವೇಶನ, ಅಮೃತಸರ, ೧೯೮೫, ಪು. ೨

೭ ಖಾಸಗಿ ಒಡೆತನದ ಹಕ್ಕು ಮೂಲವರ್ಗದ ರೂಪದಲ್ಲಿ ವ್ಯಕ್ತವಾಯಿತು. ಇದು ದಕ್ಷಿಣ ಕನ್ನಡದ ಭೂಮಾಲೀಕತ್ವದ ಒಂದು ವಿಶೇಷ ಲಕ್ಷಣವಾಗಿದೆ. ನೋಡಿ: ಬಿ.ಎಚ್ ಬೇಡೆನ್ ಪೊವೆಲ್, ದಿ ಲ್ಯಾಂಡ್ ಸಿಸ್ಟಮ್ಸ್ ಆಫ್ ಬ್ರಿಟಿಷ್ ಇಂಡಿಯಾ, ಸಂ. ೨, ಆಕ್ಸ್‌ಫರ್ಡ್, ೧೮೯೨, ಪು. ೧೪೭; ಜಾನ್ ಸ್ಟರಾಕ್, ಪೂರ್ವೋಕ್ತ, ಪು. ೧೧೮; ಎಸ್. ಸುಂದರರಾಜ ಅಯ್ಯಂಗಾರ್, ಲ್ಯಾಂಡ್ ಟೆನ್ಯೂರ್ಸ್ ಇನ್ ದಿ ಮದರಾಸ್ ಪ್ರೆಸಿಡೆನ್ಸಿ, ಮದರಾಸು, ೧೯೧೬, ಪು. ೩೨

೮ ಉಪಗೇಣಿದಾರನಿಗೆ ಖಾಯಂ ಆಗಿ ಆನುವಂಶಿಕ ಆಧಾರದಿಂದ ಜಮೀನನ್ನು ಗುತ್ತಿಗೆಗೆ ಕೊಡುವ ಪದ್ಧತಿ.

೯ ಉಪಗೇಣಿದಾರನಿಗೆ ತಾತ್ಕಾಲಿಕವಾಗಿ, ಸಾಮಾನ್ಯವಾಗಿ ಒಂದು ವರ್ಷಕ್ಕೆ ಜಮೀನನ್ನು ಗುತ್ತಿಗೆಗೆ ಕೊಡುವ ಪದ್ಧತಿ.

೧೦ ಉಪಗೇಣಿದಾರನಿಗೆ ನಿರ್ದಿಷ್ಟ ಕಾಲಾವಧಿಗೆ ಜಮೀನನ್ನು ಗುತ್ತಿಗೆಗೆ ಕೊಡುವ ಪದ್ಧತಿ

೧೧ ಬೀಜವರಿಯು, ಬಿತ್ತನೆ ಮಾಡಲು ಎಷ್ಟು ಬೀಜಬೇಕೋ ಅದರ ಆಧಾರದ ಮೇಲೆ ಲೆಕ್ಕ ಹಾಕಿದ ಜಮೀನಿನ ವಿಸ್ತೀರ್ಣವನ್ನು ಸೂಚಿಸುತ್ತದೆ. ನೋಡಿ: ಪಿ. ಗುರುರಾಜ್ ಭಟ್, ಸ್ಟಡೀಸ್ ಇನ್ ತುಳುವ ಹಿಸ್ಟರಿ ಎಂಡ್ ಕಲ್ಚರ್, ಮಣಿಪಾಲ, ೧೯೭೫, ಪು. ೨೦೪

೧೨ ಕಂದಾಯದ ವಾರ್ಷಿಕ ನಿಗದಿ, ಅಥವಾ ಒಂದು ಹಳ್ಳಿಯ, ಅಥವಾ ಒಂದು ಜಿಲ್ಲೆಯ ಅಥವಾ ಒಬ್ಬ ಬಿಡಿ ರೈತನ ಜಮೀನುಗಳ ಮೇಲೆ ಸರಕಾರವು ವಿಧಿಸುವ ತೆರಿಗೆ.

೧೩ ಕಲೆಕ್ಟರನಾದ ಥಾಮಸ್ ಹ್ಯಾರಿಸ್ ಬಿ.ಓ.ಆರ್.ಗೆ, ೧೭.೬.೧೮೨೩, ಪಿ.ಎಂ.ಬಿ.ಆರ್, ೨೬.೬.೧೮೨೩, ಸಂ. ೯೫೨, ಪು. ೫, ೧೦೨

೧೪ ಫ್ರಾನ್ಸಿಸ್ ಬುಕನನ್,: ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸಿ ಆಫ್ ಮೈಸೂರ್, ಕೆನರಾ ಎಂಡ್ ಮಲಬಾರ್, ೩ ಸಂಪುಟಗಳಲ್ಲಿ, ಸಂ. ೩, ಏಷಿಯನ್ ಎಜುಕೇಷನಲ್ ಸರ್ವಿಸಸ್, ಮೊದಲನೆಯ ಮರುಮುದ್ರಣ, ನವದೆಹಲಿ, ೧೯೮೮, ಪು. ೩೩-೪

೧೫ ಶ್ಯಾಮಭಟ್, ಎನ್.: ಸೌತ್ ಕೆನರಾ ೧೭೯೯-೧೮೬೦: "ಎ ಸ್ಟಡಿ ಇನ್ ಕಲೋನಿಯಲ್ ಎಡ್ಮಿನಿಸ್ಟ್ರೇಷನ್ ಎಂಡ್ ರೀಜನಲ್ ರೆಸ್ಪಾನ್ಸ್," ಅಪ್ರಕಟಿತ ಪಿಎಚ್.ಡಿ, ನಿಬಂಧ, ಮಂಗಳೂರು ವಿಶ್ವವಿದ್ಯಾಲಯ, ೧೯೮೭.

೧೬ ರೀಡ್ ಬಿ.ಓ.ಆರ್.ಗೆ ೩೦.೬.೧೮೦೮, ಪಿ.ಎಂ.ಬಿ.ಆರ್ ೧೧.೭.೧೮೦೮ ಸಂ. ೪೬೮, ಪು. ೫೩೨೭. ಈ ಉದ್ಧರಣದಲ್ಲಿರುವ ೧೨೦೯. ಫಸ್ಲಿ ೧೨೦೯ ಅಂದರೆ ೧೭೯೯-೧೮೦೦ರ ಬೆಳೆಯ ವರ್ಷ.

೧೭ ಅದೇ, ಪು. ೫೩೩೦.

೧೮ ರೀಡ್ ಬಿ.ಓ.ಆರ್ ಗೆ ೨೧.೪.೧೮೧೦, ಪಿ.ಎಂ. ಬಿ.ಆರ್, ೩೦.೪.೧೮೧೧, ಸಂ. ೫೪೧, ಪು. ೩೩೫೦-೫೬.

೧೯ ಅದೇ, ಪು. ೩೩೫೬

೨೦ ಅದೇ, ಪು. ೩೩೪೬; ರೀಡ್ ಬಿ.ಓ.ಆರ್‌ಗೆ, ೩೦.೪.೧೮೧೧, ಪಿ.ಎಂ.ಬಿ.ಆರ್ ೧೬.೫.೧೮೧೧, ಸಂ. ೫೪೧, ಪು. ೩೮೨೭

೨೧ ಪಿ.ಎಂ.ಬಿ.ಆರ್., ೩೦-೪-೧೮೧೦, ಸಂ. ೫೧೩, ಪು. ೩೩೪೭

೨೨ ರೀಡ್ ಬಿ.ಓ.ಆರ್. ಗೆ ೨೧.೪.೧೮೧೦, ಪೂರ್ವೋಕ್ತ, ಪು. ೩೩೪೬

೨೩ ಅದೇ, ಪು. ೩೩೫೦

೨೪ ರೀಡ್ ಬಿ.ಓ.ಆರ್.ಗೆ ೩೦.೪.೧೮೧೧, ಪೂರ್ವೋಕ್ತ, ಪು. ೩೮೨೪-೨೬

೨೫ ರೀಡ್ ಬಿ.ಓ.ಆರ್.ಗೆ , ೩೦.೪.೧೮೦೯, ಪಿ.ಎಂ.ಬಿ.ಆರ್, ೧೧.೫.೧೮೦೯, ಸಂ. ೪೮೭, ಪು. ೨೭೦೧-೦೨; ರೀಡ್ ಬಿ.ಓ.ಆರ್.ಗೆ, ೧೩.೫.೧೮೦೯, ಪಿ.ಎಂ.ಬಿ.ಆರ್ ೨೨.೫.೧೮೦೯, ಸಂ. ೪೮೮, ಪು. ೩೦೧೩; ರೀಡ್ ಬಿ.ಓ.ಆರ್‌ಗೆ, ಪಿ.ಎಂ.ಬಿ.ಆರ್ ೧೦.೧.೧೮೧೧, ಸಂ. ೫೩೩ ಪು. ೨೫೮-೫೯. ಕಿಸ್ತುಗಳು ಎಂದರೆ ಕಂದಾಯದ ಪಾವತಿ ಮತ್ತು ಗೇಣಿಯ ಕಂತುಗಳ ವಿವರ.

೨೬ ರೀಡ್ ಬಿ.ಓ.ಆರ್‌ಗೆ, ೩೦.೪.೧೮೦೯, ಪೂರ್ವೋಕ್ತ, ಪು. ೨೭೦೨-೦೩

೨೭ ಅದೇ, ೧೩-೫-೧೮೦೯, ಪೂರ್ವೋಕ್ತ, ಪು. ೩೦೧೪

೨೮

| ಕಂದಾಯದ ವರ್ಷ | ಕಂದಾಯ ರೂ.ಗಳಲ್ಲಿ |
|---|---|
| ೧೮೦೫-೦೬ | ೧೦,೧೯,೦೭೦ |
| ೧೮೦೬-೦೭ | ೯,೮೭,೦೭೭ |
| ೧೮೦೭-೦೮ | ೧೦,೦೦,೨೯೭ |
| ೧೮೦೮-೦೯ | ೯,೩೨,೯೦೮ |
| ೧೮೦೯-೧೦ | ೮,೯೨,೧೯೨ |
| ೧೮೧೦-೧೧ | ೮,೯೧,೬೯೨ |

| | |
|---|---|
| ೧೮೧೧-೧೨ | ೮,೯೧,೩೦೭ |
| ೧೮೧೨-೧೩ | ೮,೫೪,೫೬೨ |
| ೧೮೧೩-೧೪ | ೯,೨೪,೯೧೭ |

ವಿವರಗಳಿಗೆ ನೋಡಿ: ಎನ್. ಶ್ಯಾಮಭಟ್, ಪೂರ್ವೋಕ್ತ, ಪು. ೧೫೯

೨೯ ರೀಡ್ ಬಿ.ಓ.ಆರ್‌ಗೆ ೧೩.೫.೧೮೦೯, ಪೂರ್ವೋಕ್ತ, ಪು. ೩೦೧೫

೩೦ ಅದೇ, ೧೦.೧.೧೮೧೧, ಪು. ೨೫೭-೭೫

೩೧ ಅದೇ, ಪು. ೨೬೧

೩೨ ಕನ್ನಡದಲ್ಲಿ ಕೂಟು ಅಥವಾ ಕೂಟ ಎಂದರೆ ಒಟ್ಟು ಸೇರುವುದು. ಒಂದು ಸಭೆ. ಈ ಸಂದರ್ಭದಲ್ಲಿ ರೈತರು ಕಂಪೆನಿ ಸರಕಾರದ ವಿರುದ್ಧವಾಗಿ ತಮ್ಮ ಅಹವಾಲುಗಳನ್ನು ವ್ಯಕ್ತಪಡಿಸಲು, ಪರಿಹಾರ ಪಡೆಯಲು ಸೇರುತ್ತಿದ್ದ ಸಭೆಗಳನ್ನು ಆ ಪದವು ಸೂಚಿಸುತ್ತದೆ.

೩೩ ಕೂಟುಗಳು ಮತ್ತು ಅವುಗಳ ಕಾರಣವನ್ನು ಕುರಿತು ವಿಚಾರಣೆ ನಡೆಸಿ ಸರಕಾರಕ್ಕೆ ಶಿಫಾರಸುಗಳನ್ನು ಸೂಚಿಸುವ ಸಲುವಾಗಿ ಜಾನ್ ಸ್ಟೋಕ್ಸ್‌ನನ್ನು ವಿಶೇಷ ಕಮಿಶನರ್ ಆಗಿ ನೇಮಿಸಲಾಯಿತು. ನೋಡಿ: ಬಿ.ಓ.ಆರ್‌ಗೆ ಜಾನ್ ಸ್ಟೋಕ್ಸ್ ಬರೆದ ಪತ್ರ, ೧೨.೨.೧೮೩೨. ರಿಪೋರ್ಟ್ ಆನ್ ರಿವಿಜನ್ ಆಫ್ ಅಸೆಸ್‌ಮೆಂಟ್ ಎಂಡ್ ಆನ್ ದಿ ಡಿಸ್ಟರ್ಬೆನ್ಸಸ್ ನೋನ್ ಆ್ಯಸ್ ಕೂಟ್ಸ್ ಇನ್ ಕೆನರಾ ೧೮೩೦-೩೧, (ರಿಪೋರ್ಟ್ ಆಫ್ ಜಾನ್ ಸ್ಟೋಕ್ಸ್) ಮಂಗಳೂರು, ೧೮೮೫, ಪು. ೨೫; ಇದನ್ನೂ ನೋಡಿ: ವಿ.ಜೆ. ಹಡ್ಲ್‌ಸ್ಟನ್ (ಕೆನರಾದ ಸಬ್ ಕಲೆಕ್ಟರ್) ಕೆನರಾದ ಕಲೆಕ್ಟರನಿಗೆ ಬರೆದ ಪತ್ರ. ಪಿ.ಎಂ. ಬಿ.ಆರ್, ೨೦.೧.೧೮೩೧, ಸಂ. ೧೨೭೫, ಪು. ೧೨೩೬

೩೪ ಸಾರದರಾಜು, ಎ.: ಎಕನಾಮಿಕ್ ಕಂಡೀಶನ್ಸ್ ಇನ್ ದಿ ಮದ್ರಾಸ್ ಪ್ರೆಸಿಡೆನ್ಸಿ, ೧೮೦೦-೧೮೫೦, ಮದರಾಸು ೧೯೪೧, ಪು. ೨೨೫-೪೦

೩೫ ಥಾಮಸ್, ಪಿ.ಜೆ.: ಎಕನಾಮಿಕ್ ಡಿಪ್ರೆಶನ್ ಇನ್ ದಿ ಮದ್ರಾಸ್ ಪ್ರೆಸಿಡೆನ್ಸಿ, ೧೮೨೦-೫೪, ಜರ್ನಲ್ ಆಫ್ ದಿ ಮದ್ರಾಸ್ ಯೂನಿವರ್ಸಿಟಿ, ಸಂ. ೫ ಸಂಚಿಕೆ ೧ (೧೯೩೪), ಪು. ೨೧೯-೪೧

೩೬ ಅಭಿಶಂಕರ್, ಕೆ. (ಸಂ): ಕರ್ನಾಟಕ ಸ್ಟೇಟ್ ಗೆಜೆಟಿಯರ್, ದಕ್ಷಿಣ ಕನ್ನಡ ಜಿಲ್ಲೆ, ಬೆಂಗಳೂರು, ೧೯೭೩, ಪು. ೬೮

೩೭ ಡಿಕಿನ್‌ಸನ್, ಎಚ್.: ಸರಕಾರದ ಕಾರ್ಯದರ್ಶಿಗೆ ೧.೨.೧೮೩೧, ಪಿ.ಎಂ.ಬಿ.ಆರ್. ೧೦.೨.೧೮೩೧, ಸಂ. ೧೨೭೭, ಪು. ೧೮೩೭-೩೮; ಪ್ರೊಸೀಡಿಂಗ್ಸ್ ಆಫ್ ದಿ ಮದ್ರಾಸ್ ರೆವಿನ್ಯೂ ಡಿಪಾರ್ಟ್‌ಮೆಂಟ್ (ಪಿ.ಎಂ. ಆರ್.ಡಿ), ೮.೨.೧೮೩೧, ಸಂ. ೩೬೩, ಪು. ೫೧೫-೧೬

೩೮ ರಿಪೋರ್ಟ್ ಆಫ್ ಜಾನ್ ಸ್ಟೋಕ್ಸ್, ಪೂರ್ವೋಕ್ತ, ಪು. ೨೭ ಮತ್ತು ೧೦೭

೩೯ ಪಿ.ಎಂ.ಆರ್.ಡಿ, ೮.೨.೧೮೩೧, ಸಂ. ೩೬೩; ಪಿ.ಎಂ.ಬಿ.ಆರ್ ೩೧.೩.೧೮೩೧, ಸಂ. ೧೨೮೧, ಪು. ೩೨೯೦

೪೦ ರಿಪೋರ್ಟ್ ಆಫ್ ಜಾನ್ ಸ್ಟೋಕ್ಸ್, ಪೂರ್ವೋಕ್ತ, ಪು. ೨೫

೪೧ ಅದೇ, ಕ್ರಮವಾಗಿ ೧೧೪,೧೦೪,೧೦೮,೩೦,೧೧೦,೧೧೭,೧೧೦,೧೦೮,೧೦೮,೧೧೨,ಮತ್ತು ೧೧೨ನೆಯ ಪುಟಗಳು.

೪೨ ಅದೇ, ಪು. ೧೧೨; ದೇರೇಬೈಲ್ ರಾಮಯ್ಯನ ವಿಚಾರಣೆ; ೨.೧೨.೧೮೩೧, ಪ್ಯಾರಾ ೩೯, ನಂ. ೧೫೮ ಜಾನ್ ಸ್ಟೋಕ್ಸ್, ಕೆನರಾ ಮುಖ್ಯ ಕಲೆಕ್ಟರನ ಸೇವೆಯಲ್ಲಿದ್ದ ಮುಖ್ಯ ಶಿರಸ್ತೆದಾರ್ ಕೃಷ್ಣರಾವ್, ಅವನ ಸೋದರ ರಂಗರಾವ್ ಮತ್ತು ಇತರ ಬ್ರಾಹ್ಮಣ ನೌಕರರ ಮೇಲೆ ಹೊರಿಸಿದ ಆಪಾದನೆಗಳ ವಿಚಾರಣೆಯ ಸಾರಾಂಶ ೧೭.೧.೧೮೩೩ ಮದರಾಸ್ ಜ್ಯುಡಿಷಿಯಲ್ ಕನ್ಸಲ್ಟೇಷನ್ಸ್, ೧೮.೪.೧೮೩೩

೪೩ ಹಟ್ಟಿಯಂಗಡಿ ಗಂಗಾಧರಯ್ಯನ ವಿಚಾರಣೆ, ೨೨.೧೨.೧೮೩೧ ಪ್ಯಾರಾ ೮೧, ನಂ. ೧೮೦, ಜಾನ್ ಸ್ಟೋಕ್ಸ್, ಕೆನರಾ; ರಂಗಯ್ಯನ ವಿಚಾರಣೆ ೮.೫.೧೮೩೨, ಪ್ಯಾರಾ ೨೫೭, ನಂ. ೨೬೪ ಜಾನ್ ಸ್ಟೋಕ್ಸ್, ಕೆನರಾ

೪೪ ಧನಗೆರೆ, ಡಿ.ಎನ್.: ಪೂರ್ವೋಕ್ತ, ಪು. ೬೧-೮೨

೪೫ ರಿಪೋರ್ಟ್ ಆಫ್ ಜಾನ್ ಸ್ಟೋಕ್ಸ್, ಪು. ೧೧೪-೧೬

೪೬ ಅದೇ, ಪು. ೧೧೫

೪೭ ಅದೇ, ಪು. ೧೧೭-೧೮

೪೮ ಅದೇ, ಪು. ೧೧೮

೪೯ ಅದೇ, ಪು. ೧೧೯
ಮುಂದೆ ಬ್ರಿಟಿಷ್ ಸಾಮ್ರಾಜ್ಯದ ಆಡಳಿತಾಧಿಕಾರಿಗಳು ತಳೆದ ಅಭಿಪ್ರಾಯವು ಇದೇ ಆಗಿತ್ತು. ನೋಡಿ: ಜಾನ್ ಸ್ಟುರಾಕ್, ಪೂರ್ವೋಕ್ತ ಪು. ೧೧೫, ಸ್ವಾರಸ್ಯವೆಂದರೆ ಗೆಜೆಟಿಯರ್‌ನ ಮುಂದಿನ ಆವೃತ್ತಿಯೂ ಅರಿವಿಲ್ಲದೆಯೇ ಈ ಪಾಠವನ್ನು ಕೊಡುತ್ತದೆ. ನೋಡಿ ಕೆ.ಅಭಿಶಂಕರ್ (ಸಂ) ಪೂರ್ವೋಕ್ತ, ಪು. ೬೯

೫೦ ರಿಪೋರ್ಟ್ ಆಫ್ ಜಾನ್ ಸ್ಟೋಕ್ಸ್, ಪೂರ್ವೋಕ್ತ, ಪು. ೧೧೯

೫೧ ಅದೇ, ಪು. ೧೦೪
ಉಲ್ಲೇಖಿತರಾಗಿರುವ ಮೂವರಲ್ಲಿ ದೇರೇಬೈಲು ರಾಮಯ್ಯ ಬ್ರಾಹ್ಮಣನಲ್ಲ!

೫೨ ಅದೇ, ಪು. ೧೧೯

೫೩ ಅದೇ, ಪು. ೧೦೮

೫೪ ಅದೇ, ಪು. ೧೨೨

೫೫ ಅರ್ಕುಳ ಕೃಷ್ಣಪ್ಪ ಹೆಗ್ಗಡೆಯ ವಿಚಾರಣೆ, ೯.೧೧.೧೮೩೧, ಪ್ಯಾರಾ ೩, ನಂ. ೧೧೯ ಜಾನ್ ಸ್ಟೋಕ್ಸ್ ಕೆನರಾ

೫೬ ರಿಪೋರ್ಟ್ ಆಫ್ ಜಾನ್ ಸ್ಟೋಕ್ಸ್, ಪು. ೧೧೨

೫೭ ಅದೇ. ಪು. ೧೨೨

೫೮ ಹಿಂದಿನ ಒಂದು ಪ್ರಬಂಧದಲ್ಲೇ ನಾವು ಈ ನಿಲುವನ್ನು ವ್ಯಕ್ತಪಡಿಸಿದ್ದಾಗಿದೆ. ನೋಡಿ: ಎನ್ ಶ್ಯಾಮಭಟ್, "ದಿ ಪೆಸೆಂಟ್ ಅನ್‌ರೆಸ್ಟ್ ಇನ್ ಕೆನರಾ ೧೮೩೦-೩೧," ಮದರಾಸು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದಲ್ಲಿ ನಡೆದ ಐ.ಸಿ.ಎಚ್.ಆರ್ ಸೆಮಿನಾರಿನಲ್ಲಿ ಮಂಡಿಸಿದ ಪ್ರಬಂಧ, ೧೯೮೫

೫೯ ರೋಮಿಲಾ ಥಾಪರ್: ಕಮ್ಯೂನಲಿಸಂ ಎಂಡ್ ದಿ ರೈಟಿಂಗ್ ಆಫ್ ಇಂಡಿಯನ್ ಹಿಸ್ಟರಿ, ನವದೆಹಲಿ, ೧೯೭೭; ಬಿಪಿನ್ ಚಂದ್ರ, ಕಮ್ಯೂನಲಿಸಂ ಇನ್ ಮಾಡರ್ನ್ ಇಂಡಿಯಾ, ನವದೆಹಲಿ, ೧೯೮೪, ಪು. ೨೦೯-೩೬

೬೦ ರಿಪೋರ್ಟ್ ಆಫ್ ಜಾನ್ ಸ್ಟೋಕ್ಸ್, ಪು. ೧೨೦

೬೧ ಅದೇ.

೬೨ ಅದೇ, ಪು. ೧೧೯

೬೩ ಅದೇ, ಪು. ೧೦೫

೬೪ ಅದೇ, ಪು. ೧೧೨

೬೫ ಅದೇ, ಪು. ೧೧೩

೬೬ ಪಿ.ಎಂ.ಬಿ.ಆರ್ ೬.೬.೧೮೩೩, ಸಂ. ೧೩೬೮, ಪು. ೭೧೨೮

೬೭ ರಿಪೋರ್ಟ್ ಆಫ್ ಜಾನ್ ಸ್ಟೋಕ್ಸ್, ಪು. ೧೧೩

೬೮ ಪಿ.ಎಂ.ಬಿ.ಆರ್, ೨೮.೩.೧೮೩೭, ಸಂ. ೧೬೫೨, ಪು. ೩೯೮೨-೯೮೫

೬೯ ಪ್ರೊಸೀಡಿಂಗ್ಸ್ ಆಫ್ ದಿ ಮದ್ರಾಸ್ ಜ್ಯುಡಿಷಿಯಲ್ ಡಿಪಾರ್ಟ್‌ಮೆಂಟ್ (ಪಿ.ಎಂ.ಜೆ.ಡಿ), ೧೯.೪.೧೮೩೧, ಸಂ. ೨೩೮ ಎ, ಪು. ೮೯೨

೭೦ ಅದೇ, ೨೦.೫.೧೮೩೧, ಸಂ. ೨೩೯ ಬಿ, ಪು. ೧೩೦೩